# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಜೂನ್ 03, 2022

ಸಂಪುಟ : 49 ಸಂಚಿಕೆ : 20 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com



ಯಾವಾಗಲೂ 100% ಅಸಲಿ ಉತ್ಪನ್ನಗಳು • ಅತ್ಯಂತ ಕಡಿಮೆ ಬೆಲೆ • ಅತ್ಯುತ್ತಮ ಬ್ರ್ಯಾಂಡ್ • ಅತ್ಯುತ್ತಮ ಸರ್ವೀಸ್ • ಅತ್ಯುತ್ತಮ ಎಕ್ಸ್ಟೆಂಡೆಡ್ ವಾರಂಟಿ • ನೈಜ ಕೊಡುಗೆ • ನೈಜ ಬಹುಮಾನ

ಗೆಲ್ಲಿರಿ 16 ಕೋಟಿ ಮೌಲ್ಯದ ಪೈ ಲಾಯಲ್ಟಿ ಪಾಯಿಂಟ್ಸ್

ದಾವಣಗೆರೆಯಲ್ಲಿ ಪೈ ಉದ್ಘಾಟನಾ ಕೊಡುಗೆ*
03ನೇ ಜೂನ್ 2022

ಗೆಲ್ಲಿರಿ ₹30 ಲಕ್ಷ* ಮೌಲ್ಯದ ಉಚಿತ ಶಾಪಿಂಗ್

ಪ್ರತಿ ಖರೀದಿಗೆ ಖಚಿತವಾದ ಉಡುಗೊರೆ

ತ್ವರೆಮಾಡಿ! ಸ್ಟಾಕ್ ಲಭ್ಯವಿರುವವರೆಗೆ ಮಾತ್ರ

ಪೈ ಇಂಟರ್‌ನ್ಯಾಶನಲ್®
ಪೈ ಫರ್ನಿಚರ್®
ಪೈ ಮೊಬೈಲ್ಸ್®

ಎಲ್ಲಾ ಕೊಡುಗೆಗಳು ದಾವಣಗೆರೆ ಸ್ಟೋರ್‌ನಲ್ಲಿ ಮಾತ್ರ ಲಭ್ಯ

COST TO COST SALE

iPhone 13 128GB — FREE Smart Watch* — ₹79,900 Effective Price* ₹59,900

SAMSUNG 12/256GB Galaxy S22 Ultra — FREE Smart Watch* — ₹1,31,999 Effective Price* ₹97,999

vivo V23 Pro 5G — FREE Smart Watch* — ₹41,990 Effective Price* ₹32,490

Boat TWS — ₹4,490 Special Price ₹999

Bluetooth Neckband — ₹1,599 Special Price ₹599

HENRY 80cm (32) HD ready and Bezel-less TV — FREE 5 Gm Silver Coin — Special Price : ₹12,990

LG 122cm (48) 4K Smart OLED TV — LG OLED — FREE 10 Gm Silver Coin — Special Price : ₹77,990

SAMSUNG 580L Twin Cooling Plus™ French Door Refrigerator — FREE Henry Tower Fan & Quilt worth ₹10,589 — Special Price ₹73,700

BOSCH 8 kg Front Loading Washing Machine — FREE Quilt worth ₹5,999 — Special Price ₹38,700

HAVELLS Water Purifier COMBO — Special Price : ₹22,990

Prestige 4 Burner Gas Stove COMBO — Special Price : ₹10,290

HDFC BANK — SUMMER TREATS — Up to 10%* INSTANT DISCOUNT
Min. Trxn: ₹20,000. Max. Discount ₹2,500 for CC & DC EMI transactions. Max. Discount ₹1,000 for CC Normal transactions. Valid only on Fri, Sat & Sun. *T&C Apply

HDB FINANCIAL SERVICES — Up to 10%* CASH BACK
Validity: 3-Jun to 6-Jun-2022. T&C Apply.
Applicable for Davanagere MBS only.

BAJAJ FINSERV — Up to 5,000 CASH* BACK
Validity: Till 10-Jun-2022. T&C Apply.
Applicable for Davanagere MBS only.

SELECT, SWIPE & PAY IN AFFORDABLE EMIS
ON CREDIT CARDS AMEX . AXIS . BoB . CITI . HDFC . HSBC . ICICI INDUSIND BANK. KOTAK . RBL . SBI. STANCHART . YES BANK
ON DEBIT CARDS HDFC . ICICI . AXIS . SBI . FEDERAL
NO DOCUMENTATION | NO DOWN-PAYMENT

FREE HP Bluetooth Speaker & Bluetooth Headset worth ₹5,999

Lenovo — . 11th Gen Core i3 . 8GB RAM . 512GB SSD . Windows 11 . MS Office H&S — FREE Backpack — ₹65,690 Special Price* ₹39,990

hp Gaming Laptop — . R5-5600H . 8GB RAM . 512GB SSD / 4GB . Windows 11 . MS Office H&S — FREE Backpack — ₹73,544 Special Price* ₹59,990

UPTO 52% OFF — ಪೈ ಫರ್ನಿಚರ್®

TILL DATE GENUINELY DISTRIBUTED!
320 CARS — ₹22.5 CRORE worth FREE SHOPPING
320 BIKES — ₹7.3 CRORE worth FREE GOLD
₹2.6 CRORE worth CASH PRIZES
64.57 CRORE PAI LOYALTY POINTS

+91 91084 44777 Service / Helpline: 080-42 46 43 43 (10am to 7pm) Follow us on:

Store Locator

DROP THIS COUPON & WIN AMAZING PRIZES*
Only at Pai Davangere Store.

1st Prize Henry LED TV 32 1 Customer

2nd Prize 2,000 Pai Loyalty Points 100 Customers

*T&C: All the offers stated in this Advt are applicable in Davangere MBS store only. All Free Gifts are applicable on PSP Purchases only. Mobile Phone effective price is arrived from deducting brand cashback & old mobile exchange of 5k min value. No two offers can be clubbed together. Offer valid till stocks last. Silver coin offer valid on tag psp to first 100 customers only on CE & HA products only. The Finance scheme, low down-payment scheme, EMI, Tenure, Credit/Loan is at the sole & exclusive discretion of the financiers/card issuing bank at their own terms & conditions. Processing fee applicable on select models within select brands. Product images are for representational purpose only, actual product may vary. Offer not applicable on Samsung, Sony, MI, iPhone, Oneplus, Realme, Recharges, Accessories, Bulk & Institutional orders. Limited period offer. Offer valid on select models within select brands. Pai International reserves the right to withdraw, change or modify the offers, prizes, prices, terms & conditions at any time without any prior notice. Offer applicable till stocks last. Any disputes are subject to Bangalore jurisdiction only. Consumer offers are applicable as per the Brand's terms & conditions. *Buy Back at the sole discretion of Pai International. Damage protection is not applicable on iPhone and Xiaomi Mobile phones. ##Free standard installation applicable to select brands & models only. Cashback if any at the sole discretion of the Bank/NBFC/Partner/Merchant/Brand. No two cashback offers can be clubbed together. cashback not applicable on Corporate Cards/Business Cards/Amazon Pay Credit Card/Flipkart Credit Card. All MMM 2022 *T&C are applicable.

FREE DELIVERY For Refrigerators, Washing Machines, LED TVs & Furniture (within city limits)

BE ONE OF OUR LUCKY WINNER
Drop this COUPON & get a chance to Win EXCITING PRIZES*
Name:
Address:
Mobile No:
E-mail ID:
Coupon Code: 03DVG221JV22.
Terms & Conditions apply: Buying of product is not compulsory to participate in this offer. Drop this coupon on or before 17-June-2022 at Pai Davangere Store.

## ಕಾಮಗಾರಿ ಪರಿಶೀಲಿಸಿದ ಶಾಸಕ ರಾಮಪ್ಪ



ಮಲೇಬೆನ್ನೂರು, ಜೂ.2- ಬಹಳ ವರ್ಷಗಳಿಂದ ಅಭಿವೃದ್ಧಿ ಕಾಣದೇ ನೆನೆಗುದಿಗೆ ಬಿದ್ದಿದ್ದ ಎಕ್ಕೆಗೊಂದಿ - ಭಾನುವಳ್ಳಿ ರಸ್ತೆ ಅಭಿವೃದ್ಧಿ ಭರದಿಂದ ಸಾಗಿದ್ದು, ಭಾನುವಾರ ಶಾಸಕ ಎಸ್.ರಾಮಪ್ಪ ಭೇಟಿ ನೀಡಿ ಪರಿಶೀಲಿಸಿದರು. 13.50 ಕೋಟಿ ರೂ. ವೆಚ್ಚದಲ್ಲಿ ಎಕ್ಕೆಗೊಂದಿ ಕ್ರಾಸ್‌ನಿಂದ ಭಾನುವಳ್ಳಿ ಊರ ಹೊರಗಿನ ಚಾನಲ್‌ವರೆಗೆ ಸಿಸಿ ರಸ್ತೆ ಮಾಡಲಾಗುತ್ತಿದೆ. ರಸ್ತೆ ಮಧ್ಯೆ ಹೈಟೆಕ್ ವಿದ್ಯುತ್ ದೀಪಗಳನ್ನು ಹಾಕಲಾಗುವುದು. ಹರಿಹರ ತಾಲ್ಲೂಕಿನಲ್ಲಿ ಇದೊಂದು ಉತ್ತಮ ರಸ್ತೆ ಆಗಲಿದೆ ಎಂದು ಶಾಸಕ ರಾಮಪ್ಪ ಹರ್ಷ ವ್ಯಕ್ತಪಡಿಸಿದರು. ಲೋಕೋಪಯೋಗಿ ಇಲಾಖೆ ಇಂಜಿನಿಯರ್ ಶಿವಮೂರ್ತಿ ಇದ್ದರು.

## ಮಲೇಬೆನ್ನೂರಿನಲ್ಲಿ ಅವಧೂತರು



ಮಲೇಬೆನ್ನೂರು, ಜೂ.2- ಪಟ್ಟಣದ ಹೊರ ಹೊಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಪ್ರಥಮ ವಾರ್ಷಿಕೋತ್ಸವದ ಅಂಗವಾಗಿ ದೇವಸ್ಥಾನದಲ್ಲಿ ಬುಧವಾರ ಲೋಕ ಕಲ್ಯಾಣಾರ್ಥವಾಗಿ ಗಣ ಹೋಮ, ಮೃತ್ಯುಂಜಯ ಹೋಮ ಮತ್ತು ಯಜ್ಞವನ್ನು ಮಾಡಲಾಯಿತು. ನಂತರ ಚಳ್ಳಕೆರೆ ತಾಲ್ಲೂಕು ದೊಡ್ಡೇರಿಯ ಶ್ರೀ ಸತ್ ಉಪಾಸಿ ಅವಧೂತರು ಪೂರ್ಣಾಹುತಿ ನೆರವೇರಿಸಿ, ಭಜನೆ ಸತ್ಸಂಗ ನಡೆಸಿಕೊಟ್ಟರು.

# ಯಾರಿಗೇ ಟಿಕೆಟ್ ನೀಡಿದರೂ ಒಗ್ಗಟ್ಟಿರಲಿ : ಸಂಸದ ಸಿದ್ದೇಶ್ವರ



## ವೀರೇಶ್ ಹನಗವಾಡಿ ಹುಟ್ಟುಹಬ್ಬ : ಮಕ್ಕಳಿಗೆ 30 ಸಾವಿರ ನೋಟ್‌ಬುಕ್ ವಿತರಣೆ

ಹರಿಹರ, ಜೂ. 2 - ಎಸ್.ಎಂ. ವೀರೇಶ್ ಹನಗವಾಡಿ ಅವರು ಪಕ್ಷದ ಕಾರ್ಯಕರ್ತರಾಗಿ, ಶಿಸ್ತಿನ ಸಿಪಾಯಿಯಾಗಿ, ಜಿಲ್ಲಾ ಪಂಚಾಯತಿ ಅಧ್ಯಕ್ಷರಾಗಿ ಉತ್ತಮ ಸೇವೆ ಮಾಡಿದ್ದಾರೆ. ಅವರ ರಾಜಕೀಯ ಭವಿಷ್ಯ ಮುಂದಿನ ದಿನಗಳಲ್ಲಿ ಉತ್ತುಂಗದತ್ತ ಸಾಗುವ ಸೂಚನೆ ನೀಡುತ್ತಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸದರು.

ನಗರದ ಸಿದ್ದೇಶ್ವರ ಪ್ಯಾಲೇಸ್‌ನಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಸ್ನೇಹ ಬಳಗದ ವತಿಯಿಂದ ನಡೆದ ಎಸ್.ಎಂ. ವೀರೇಶ್ ಹನಗವಾಡಿ ಅವರ 48 ನೇ ಹುಟ್ಟು ಹಬ್ಬದ ನಿಮಿತ್ತವಾಗಿ ಸರ್ಕಾರಿ ಪ್ರೌಢಶಾಲಾ ಮಕ್ಕಳಿಗೆ 30 ಸಾವಿರ ನೋಟ್ ಬುಕ್ ವಿತರಣೆ, ಕೊರೊನಾ ಸಮಯದಲ್ಲಿ ಸೇವೆಯನ್ನು ಸಲ್ಲಿಸಿರುವ ಆಶಾ ಕಾರ್ಯಕರ್ತರಿಗೆ, ಪತ್ರಕರ್ತರಿಗೆ, ಅಂಗನವಾಡಿ ಕಾರ್ಯಕರ್ತರು, ಆರೋಗ್ಯ ಇಲಾಖೆ ವೈದ್ಯರು, ಸಿಬ್ಬಂದಿಗಳು ಸೇರಿದಂತೆ ಸೇವಾ ಸಾಧಕರಿಗೆ ಸನ್ಮಾನ ಸಮಾರಂಭವನ್ನು ಉದ್ಘಾಟನೆ ಮಾಡಿ ಅವರು ಮಾತನಾಡಿದರು.

ವೀರೇಶ್ ಜಿಲ್ಲೆಯಲ್ಲಿ ಬಿಜೆಪಿ ಪಕ್ಷವನ್ನು ಸದೃಢವಾಗಿ ಕಟ್ಟುತ್ತಾರೆ ಎಂದು ಅವರನ್ನು ಎಲ್ಲರೂ ಒಮ್ಮತದಿಂದ ಬಿಜೆಪಿ ಜಿಲ್ಲಾ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾರೆ. ಅವರು ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಸುತ್ತಾಡಿ ಸಾಕಷ್ಟು ಶ್ರಮವಹಿಸಿ ಪಕ್ಷದ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಸಂಸದರು ಹೇಳಿದರು.

ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಮಾತನಾಡಿ, ವೀರೇಶ್ ಹನಗವಾಡಿಯವರು ತಮ್ಮ ಕುಟುಂಬದ ಸದಸ್ಯರೊಂದಿಗೆ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಹುಟ್ಟು ಹಬ್ಬವನ್ನು ಆಚರಣೆ ಮಾಡಿಕೊಳ್ಳಬಹುದಿತ್ತು. ಆದರೆ ಬಡವರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ವೀರೇಶ್ ಅವರು ಇಂತಹ ವಿಭಿನ್ನ ಮತ್ತು ಅಭೂತಪೂರ್ವ ಕಾರ್ಯಕ್ರಮ ಆಯೋಜಿಸಿದ್ದಾರೆ ಎಂದರು.

ಪರಿಷತ್ ಸದಸ್ಯ ಕೆ.ಎಸ್. ನವೀನ್, ಮಾಯಕೊಂಡ ಶಾಸಕ ಪ್ರೊ. ಲಿಂಗಣ್ಣ, ಮುಖಂಡರಾದ ಮಾಡಾಳ್ ಮಲ್ಲಿಕಾರ್ಜುನ್ ಹಾಗು ಇತರರು ಮಾತನಾಡಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಮಾತನಾಡಿ, ನನಗೆ ಮೊದಲಿನಿಂದಲೂ ಜನರ ಮಧ್ಯದಲ್ಲಿ ಇದ್ದು, ಬಡವರ ಕಷ್ಟಗಳಿಗೆ ಸ್ಪಂದಿಸುವ ಕೆಲಸವನ್ನು ಮಾಡುತ್ತಾ ಬಂದಿದ್ದರಿಂದ ಸ್ನೇಹ ಬಳಗದ ಈ ತೀರ್ಮಾನ ನನಗೆ ಹುಮ್ಮಸ್ಸು ತರಿಸಿತು. ವಿಶ್ವ ಆರೋಗ್ಯ ಸಂಸ್ಥೆ, ಭಾರತದ ಆಶಾ ಕಾರ್ಯಕರ್ತರ ಕಾರ್ಯವೈಖರಿ ನೋಡಿ ಮೆಚ್ಚುಗೆ ವ್ಯಕ್ತಪಡಿಸಿ ಅಭಿನಂದನೆಗಳನ್ನು ತಿಳಿಸಿರುವುದು ಶ್ಲಾಘನೀಯ. ವಿದ್ಯಾರ್ಥಿ ಗಳಿಗೆ ಸ್ಫೂರ್ತಿ ತುಂಬಬೇಕು ಎಂಬ ದೃಷ್ಟಿಯಿಂದ ಪ್ರೌಢಶಾಲಾ ಮಕ್ಕಳಿಗೆ ಉಚಿತ ಪುಸ್ತಕ ಗಳನ್ನು ನೀಡಲಾಗಿದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ಸೋಮಸುಂದರಪ್ಪ ವಹಿಸಿದ್ದರು.

ಸಮಾರಂಭದಲ್ಲಿ ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಕಳಿಸಿರುವ ಹುಟ್ಟು ಹಬ್ಬದ ಶುಭಾಶಯಗಳನ್ನು ಕೋರಿದ ಪತ್ರವನ್ನು ಬಿಜೆಪಿ ನಗರ ಘಟಕದ ಮಾಜಿ ಅಧ್ಯಕ್ಷ ಹಲಸಬಾಳು ಎಂ. ಶಿವಾನಂದಪ್ಪ ಓದಿದರು.

ಈ ಸಂದರ್ಭದಲ್ಲಿ ಕೆ. ರೂಪಾ ಎಸ್.ಎಂ. ವೀರೇಶ್, ಮಾಜಿ ಶಾಸಕ ಬಿ.ಪಿ. ಹರೀಶ್, ಶಿವಲಿಂಗಪ್ಪ ವಕೀಲರು ರಾಣೇಬೆನ್ನೂರು, ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ಮಹಾನಗರ ಪಾಲಿಕೆ ಮಾಜಿ ಅಧ್ಯಕ್ಷ ಬಿ.ಜಿ. ಅಜಯ್ ಕುಮಾರ್, ಹರಿಹರ ಘಟಕದ ಮಾಜಿ ಅಧ್ಯಕ್ಷ ಹಲಸಬಾಳು ಶಿವಾನಂದಪ್ಪ, ತಾ.ಪಂ. ಮಾಜಿ ಅಧ್ಯಕ್ಷ ಅಣ್ಣಪ್ಪ, ಸೊಕ್ಕೆ ನಾಗರಾಜ್, ಶ್ರೀನಿವಾಸ್ ದಾಸಕರಿಯಪ್ಪ, ಗ್ರಾಮಾಂತರ ಘಟಕದ ಅಧ್ಯಕ್ಷ ಲಿಂಗರಾಜ್ ಹಿಂಡಸಘಟ್ಟ, ನಗರಸಭೆ ಸದಸ್ಯರಾದ ಅಶ್ವಿನಿ ಕೃಷ್ಣ, ರಜನಿಕಾಂತ್, ಹನುಮಂತಪ್ಪ, ಎ.ಬಿ. ವಿಜಯಕುಮಾರ್, ಮಂಜಾನಾಯ್ಕ್, ಅಂಬುಜಾ ಪಿ. ರಾಜೊಳ್ಳಿ. ರೂಪಾ ಕಾಟ್ವೆ, ಪ್ರಮೀಳಾ ನಲ್ಲೂರು, ಹೆಚ್.ಸಿ. ಕೀರ್ತಿಕುಮಾರ್, ಬೆಳ್ಳೂಡಿ ಬಕ್ಕೇಶ್, ನಾಗನಗೌಡ್ರು ಕೆ.ಎನ್.ಹಳ್ಳಿ, ಬಾತಿ ಚಂದ್ರಶೇಖರ್, ಅಜಿತ್ ಸಾವಂತ್, ದಾವಣಗೆರೆ ನಗರ ಪಾಲಿಕೆ ಸದಸ್ಯ ಸೋಗಿ ಶಾಂತ್ ಕುಮಾರ್, ನಾಗರಾಜ್ ಲೋಕಿಕೆರೆ, ಶಾಂತರಾಜ್, ಸಾಲಕಟ್ಟೆ ಸಿದ್ದಪ್ಪ, ಸುರೇಶ್ ತೆರದಾಳ ಮತ್ತಿತರರು ಹಾಜರಿದ್ದರು.

ಬಿಜೆಪಿ ಜಿಲ್ಲೆಯಲ್ಲಿ ಸದೃಢವಾಗಿದ್ದು ಜಿಲ್ಲೆಯ 6 ವಿಧಾನಸಭಾ ಕ್ಷೇತ್ರಗಳಲ್ಲಿ ಶಾಸಕರನ್ನು ಹೊಂದಿದೆ. ಆದರೆ, ಇಲ್ಲಿನ ಕ್ಷೇತ್ರದಲ್ಲಿ ಸ್ವಲ್ಪ ಮಟ್ಟಿಗೆ ವ್ಯತ್ಯಾಸವಾಗಿ ಪಕ್ಷಕ್ಕೆ ಹಿನ್ನಡೆ ಆಗಿತ್ತು ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದ್ದಾರೆ. ಆದರೂ, ಹರಿಹರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಪಕ್ಷ ಬಹಳ ಸದೃಢವಾಗಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಬಿ.ಪಿ. ಹರೀಶ್, ಎಸ್.ಎಂ. ವೀರೇಶ್ ಹನಗವಾಡಿ, ಚಂದ್ರಶೇಖರ್ ಪೂಜಾರ್ ಆಕಾಂಕ್ಷಿತರಾಗಿದ್ದು ಮುಂದೆ ಪಟ್ಟಿ ದೊಡ್ಡದಾಗಬಹುದು. ಆದರೆ ಪಕ್ಷವು ಅಭ್ಯರ್ಥಿಯಾಗಿ ಯಾರನ್ನು ಆಯ್ಕೆ ಮಾಡುತ್ತದೆಯೋ ಅವರನ್ನು ಒಗ್ಗಟ್ಟಿನಿಂದ ದುಡಿದು ಗೆಲ್ಲಿಸಬೇಕು. ಇದರಿಂದಾಗಿ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳು ಆಗುವುದಕ್ಕೆ ದಾರಿಯಾಗುತ್ತದೆ ಎಂದು ಸಿದ್ದೇಶ್ವರ ಹೇಳಿದರು.

## ಕಾಶೀಪುರ ಕ್ಯಾಂಪಿನಲ್ಲಿ ಇಂದು ಗುರುವಂದನೆ

ತರಳಬಾಳು ವಿದ್ಯಾಸಂಸ್ಥೆಯ ಎಂಬಿಆರ್ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾಗಿ ಸೇವೆ ಸಲ್ಲಿಸಿ ನೂರಾರು ರಾಷ್ಟ್ರೀಯ, ಅಂತರರಾಷ್ಟ್ರೀಯ ಕ್ರೀಡಾಪಟುಗಳನ್ನು ತಯಾರು ಮಾಡಿ ನಿವೃತ್ತರಾಗಿರುವ ಜಿ. ರಾಮಪ್ರಭು ಅವರಿಗೆ ಕ್ರೀಡಾಪಟುಗಳು, ಹಿರಿಯ ವಿದ್ಯಾರ್ಥಿಗಳಿಂದ ಇಂದು ಮಧ್ಯಾಹ್ನ 12.30 ಕ್ಕೆ ಚನ್ನಗಿರಿ ತಾಲ್ಲೂಕು ಕಾಶೀಪುರ ಕ್ಯಾಂಪಿನ ಪೂರ್ಣಿಮಾ ರೈಸ್ ಇಂಡಸ್ಟ್ರೀಸ್ ಆವರಣದಲ್ಲಿ ಗುರುವಂದನಾ ಕಾರ್ಯಕ್ರಮ ನಡೆಯಲಿದೆ.

ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು.

ರಾಮಪ್ರಭು ಅವರು ಗ್ರಾಮೀಣ ಮಕ್ಕಳಲ್ಲಿನ ತಾಕತ್ತು ಗುರುತಿಸಿ ಪದಕಗಳ ಫಸಲು ತೆಗೆದ 'ಕ್ರೀಡಾ ಕೃಷಿಕ'. ಕ್ರೀಡಾಪಟುಗಳಾಗಿ, ಕ್ರೀಡಾಪಟುಗಳನ್ನು ತಯಾರು ಮಾಡಿ, ತಮ್ಮ ಮಕ್ಕಳಿಗೆ ಸರಿಸಮನಾಗಿ ಪ್ರೀತಿಸಿದವರು. ಯಾವುದೇ ಪ್ರಶಸ್ತಿಗಳನ್ನು ಅರಸಿ ಹೋಗದ ಇವರು ಕ್ರೀಡಾಲೋಕ ಎಂಬ ಗರಡಿಯಲ್ಲಿ ವಿದ್ಯಾರ್ಥಿಗಳನ್ನು ಪಳಗಿಸಿ ಕಷ್ಟ ಕಾಲದಲ್ಲಿ ಹಣಕಾಸಿನ ನೆರವನ್ನೂ ನೀಡಿ, ಅವರ ಸಾಧನೆಗಳೇ ಪ್ರಶಸ್ತಿಗಳೆಂದು ಹೆಮ್ಮೆಪಡುವ ಅವರು ನೆಚ್ಚಿನ ಕ್ರೀಡಾ ಶಿಷ್ಯಂದಿರ ಪಾಲಿಗೆ ದ್ರೋಣಾಚಾರ್ಯರಾಗಿದ್ದಾರೆ.

ಲೆಕ್ಕಪರಿಶೋಧಕರಾದ ಅಂಬರ್‌ಕರ್ ವಿರೂಪಣ್ಣ ಅವರಿಗೆ ಸನ್ಮಾನ ಏರ್ಪಡಿಸಲಾಗಿದೆ. ರಾಜ್ಯ ಅಕ್ಕಿ ಗಿರಣಿ ಮಾಲೀಕರ ಸಂಘದ ಕಾರ್ಯಾಧ್ಯಕ್ಷರಾದ ಸಾವಿತ್ರಿ ಪುರುಷೋತ್ತಮ್ ಅಧ್ಯಕ್ಷತೆ ವಹಿಸುವರು. ಶಾಸಕ ಮಾಡಾಳು ವಿರೂಪಾಕ್ಷಪ್ಪ, ಮಾಜಿ ಶಾಸಕ ಡಿ.ಜಿ. ಶಾಂತನಗೌಡ, ರಾಜ್ಯ ಕಬ್ಬು ಬೆಳೆಗಾರರ ಸಂಘದ ಉಪಾಧ್ಯಕ್ಷ ತೇಜಸ್ವಿ ಪಟೇಲ್, ಕೆಎಸ್‌ಎಫ್‌ಸಿ ದಾವಣಗೆರೆ ಶಾಖಾ ವ್ಯವಸ್ಥಾಪಕ ಮಾಲತೇಶ ಹೆಮ್ಮಿಗಿ ಅತಿಥಿಗಳಾಗಿದ್ದಾರೆ.

## ಬಿತ್ತನೆ ಬೀಜ ಕೊರತೆಯಾಗದಂತೆ ನಿಗಾ

ಬೆಂಗಳೂರು, ಜೂ. 2 - ರಾಜ್ಯದಲ್ಲಿ ಮುಂಗಾರು ಹಂಗಾಮಿಗೆ ಬಿತ್ತನೆ ಬೀಜ ಹಾಗೂ ಗೊಬ್ಬರದ ಕೊರತೆಯಾಗದಂತೆ ಹಿರಿಯ ಅಧಿಕಾರಿಗಳು ಖುದ್ದು ನಿಗಾ ವಹಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅವರು ಇಂದು ಕೃಷಿ ಇಲಾಖೆಯ ಆಯವ್ಯಯ ಅನುಷ್ಠಾನದ ಪ್ರಗತಿ ಪರಿಶೀಲನೆ ಸಭೆ ನಡೆಸಿದರು. ರಾಜ್ಯದಲ್ಲಿ ಮೇ 31ರ ಮಾಹಿತಿಯಂತೆ 1.26 ಲಕ್ಷ ಮೆಟ್ರಿಕ್ ಟನ್ ಡಿಎಪಿ ಲಭ್ಯವಿದ್ದು, ಒಟ್ಟಾರೆ, 7.64 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಲಭ್ಯವಿದೆ. ರಾಜ್ಯದ ಬೇಡಿಕೆ ಪೂರೈಸಲು ಯಾವುದೇ ಕೊರತೆ ಇಲ್ಲ. ಆದರೆ, ವ್ಯವಸ್ಥಿತವಾಗಿ ಅಗತ್ಯ ಆಧರಿಸಿ, ರಸಗೊಬ್ಬರವನ್ನು ಸಕಾಲದಲ್ಲಿ ಪೂರೈಸಲು ಹಿರಿಯ ಅಧಿಕಾರಿಗಳೇ ಮೇಲ್ವಿಚಾರಣೆ ನಡೆಸಿ, ಯಾವುದೇ ಕೃತಕ ಅಭಾವ ಸೃಷ್ಟಿಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಸೂಚಿಸಿದರು.

ಅಂತೆಯೇ ಬಿತ್ತನೆ ಬೀಜ ರಾಜ್ಯದಲ್ಲಿ 7.81 ಲಕ್ಷ ಕ್ವಿಂಟಾಲ್‌ನಷ್ಟು ಲಭ್ಯವಿದ್ದು, ಬೇಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿಯೇ ಲಭ್ಯವಿದೆ. ಆದರೆ, ನಕಲಿ ಬೀಜಗಳ ಹಾವಳಿಯನ್ನು ತಪ್ಪಿಸಲು ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕು. ಈ ಕುರಿತು ಯಾವುದೇ ಲೋಪವಾಗದಂತೆ ಕ್ರಮ ಕೈಗೊಳ್ಳಬೇಕು. ನಕಲಿ ಬೀಜ ಪೂರೈಕೆದಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ 114.54 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ. ಇದರೊಂದಿಗೆ ಕಂದಾಯ ಇಲಾಖೆ ಹಾಗೂ ಜಲ ಸಂಪನ್ಮೂಲ ಇಲಾಖೆ ಗಳಿಂದ, ಬಂಜರು ಭೂಮಿ ಹಾಗೂ ಸವಳು-ಜವಳು ಭೂಮಿಯ ಮಾಹಿತಿ ಪಡೆದು, ಈ ವರ್ಷ ಕನಿಷ್ಠ ತಲಾ ಒಂದು ಲಕ್ಷ ಹೆಕ್ಟೇರ್ ನಷ್ಟು ಬಂಜರು ಭೂಮಿ ಹಾಗೂ ಸವಳು -ಜವಳು ಭೂಮಿಯನ್ನು ಕೃಷಿ ಯೋಗ್ಯವಾಗಿ ಪರಿವರ್ತಿಸುವಂತೆ ಸೂಚಿಸಿದರು.

## ಎನ್‌ಎಸ್‌ಯುಐ ಕಾರ್ಯಕರ್ತರ ಕೃತ್ಯಕ್ಕೆ ಬಿಜೆಪಿ ಖಂಡನೆ

ದಾವಣಗೆರೆ, ಜೂ. 2- ಪಠ್ಯಪುಸ್ತಕ ಪರಿಷ್ಕರಣೆ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರ ನಿವಾಸದ ಮುಂಭಾಗ ಎನ್‌ಎಸ್‌ಯುಐ ಕಾರ್ಯಕರ್ತರು ಪ್ರತಿಭಟನೆ ನೆಪದಲ್ಲಿ ಸಚಿವರ ಮನೆಗೆ ನುಗ್ಗುವ ಪ್ರಯತ್ನ ಮತ್ತು ಆರ್‌ಎಸ್‌ಎಸ್ ಸಮವಸ್ತ್ರ (ನಿಕ್ಕರ್) ಸುಟ್ಟಿರುವ ಕೃತ್ಯವನ್ನು ಭಾರತೀಯ ಜನತಾ ಪಾರ್ಟಿ ಕಾನೂನು ಪ್ರಕೋಷ್ಠದ ಜಿಲ್ಲಾ ಸಂಚಾಲಕ ಹೆಚ್. ದಿವಾಕರ್ ಖಂಡಿಸಿದ್ದಾರೆ.

ಪಠ್ಯ ಪುಸ್ತಕದ ಪರಿಷ್ಕರಣೆಯಲ್ಲಿ ಗೊಂದಲ ಉಂಟಾಗಿದ್ದರೆ ಕ್ರಮ ತೆಗೆದುಕೊಳ್ಳಲು ಅವಕಾಶವಿದೆ. ಆದರೆ ಅದನ್ನು ಬಿಟ್ಟು ಸಚಿವರ ಮನೆಗೆ ನುಗ್ಗಲು ಯತ್ನಿಸಿದ್ದ ಎನ್‌ಎಸ್‌ಯುಐ ಕಾರ್ಯಕರ್ತರನ್ನು ಕೂಡಲೇ ಬಂಧಿಸುವಂತೆ ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಮುಖಂಡ ರಾಮಲಿಂಗಾರೆಡ್ಡಿ ಎನ್‌ಎಸ್‌ಯುಐ ಕಾರ್ಯಕರ್ತರ ಕ್ರಮವನ್ನು ಸಮರ್ಥಿಸಿ ಹೇಳಿಕೆ ನೀಡಿರುವುದು ಹಾಸ್ಯಾಸ್ಪದ ಎಂದು ಬಿಜೆಪಿ ಕಾನೂನು ಪ್ರಕೋಷ್ಠದ ಪದಾಧಿ ಕಾರಿಗಳಾದ ದಿವಾಕರ್, ಎ.ಸಿ. ರಾಘವೇಂದ್ರ, ಕೆ.ಹೆಚ್. ಧನಂ ಜಯ್, ಎ.ಎಸ್. ಮಂಜುನಾಥ್, ಪಿ.ವಿ. ಶಿವಕುಮಾರ್, ತಿರುಮಲ್ಲೇಶ್ ಹೇಳಿದ್ದಾರೆ.

## ದೇವರಬೆಳಕೆರೆ ಗ್ರಾಮದ ದ್ಯಾವಕ್ಕರ ಸಿದ್ದಮ್ಮ ನಿಧನ



ಹರಿಹರ ತಾಲ್ಲೂಕು ದೇವರಬೆಳಕೆರೆ ಗ್ರಾಮದ ದಿ.ದ್ಯಾವಕ್ಕರ ರಾಮಪ್ಪನವರ ಧರ್ಮಪತ್ನಿ ಹಾಗೂ ಗ್ರಾ.ಪಂ ಮಾಜಿ ಸದಸ್ಯರೂ, ಕಾಂಗ್ರೆಸ್ ಮುಖಂಡರೂ ಆದ ಡಿ.ಆರ್. ಮಹೇಶ್ವರಪ್ಪ ಅವರ ತಾಯಿ

**ಶ್ರೀಮತಿ ಸಿದ್ದಮ್ಮ** (92 ವರ್ಷ )

ಇವರು ದಿನಾಂಕ 02.06.2022 ರ ಗುರುವಾರ ಮಧ್ಯಾಹ್ನ 12.30 ಕ್ಕೆ ದೈವಾಧೀನರಾದರು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 03.06.2022ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ದೇವರಬೆಳೆಕೆರೆ ಗ್ರಾಮದಲ್ಲಿ ನೆರವೇರಲಿದೆ.

## ಜಿ. ಜಯಪ್ರಕಾಶ್ ನಿಧನ



**ಜಿ. ಜಯಪ್ರಕಾಶ್**

PWD ಕ್ಲಾಸ್-1 ಕಂಟ್ರಾಕ್ಟರ್

ದಿ|| ಜಿ. ಜಯದೇವಪ್ಪ, ಮಾಜಿ ತಾಲ್ಲೂಕು ಬೋರ್ಡ್ ಅಧ್ಯಕ್ಷರು, ಇವರ ಪುತ್ರ

ಇವರು 02-06-2022 ಗುರುವಾರ ಮಧ್ಯಾಹ್ನ 2.30ಕ್ಕೆ ನಿಧನರೆಂದು ತಿಳಿಸಲು ವಿಷಾದಿಸುತ್ತೇವೆ.

ಇವರ ಅಂತ್ಯಕ್ರಿಯೆಯನ್ನು ದಿನಾಂಕ 03-06-2022 ಶುಕ್ರವಾರ ಬೆಳಿಗ್ಗೆ 10-30ಕ್ಕೆ ಸ್ವಗ್ರಾಮವಾದ ಭೀಮಸಮುದ್ರದಲ್ಲಿ ನೆರವೇರಿಸಲಾಗುವುದು.

: ದುಃಖತಪ್ತರು :

ಶ್ರೀಮತಿ ಸುನಂದ ಜಯಪ್ರಕಾಶ್,
ಶ್ರೀಮತಿ ಶಿಲ್ಪಾ ಚೇತನ್‌ಕುಮಾರ್, ಜಿ.ಜೆ. ಚೇತನ್‌ಕುಮಾರ್ ಮತ್ತು ಮಕ್ಕಳು.
ಶ್ರೀಮತಿ ಜಿ.ಜೆ. ರಶ್ಮಿ, ಬಿ.ಎಸ್. ಲಿಂಗರಾಜು ಮತ್ತು ಮಕ್ಕಳು.
ಮೃತರ ಸಹೋದರಿ ಹಾಗೂ ಸಹೋದರರ ಕುಟುಂಬಸ್ಥರು
ಗೌಡ್ರು ವಂಶಸ್ಥರು, ಪಟೇಲ್ ವಂಶಸ್ಥರು
ಭೀಮಸಮುದ್ರ, ತುರೇಬೈಲು ಹಾಗೂ ವಿ.ಪಾಳ್ಯ ಗ್ರಾಮಸ್ಥರು

## 3ನೇ ವರ್ಷದ ಪುಣ್ಯಸ್ಮರಣೆ



**ವೀರಮ್ಮ ಅಕ್ಕಿ**

ನೀವು ನಮ್ಮನ್ನಗಲಿ ಇಂದಿಗೆ 3 ವರ್ಷಗಳಾದವು
ಸದಾ ನಿಮ್ಮ ಸ್ಮರಣೆಯಲ್ಲಿರುವ ನಿಮ್ಮ ಕುಟುಂಬ...

**ಅಕ್ಕಿ ವಂಶಸ್ಥರು ಹಾಗೂ ಬಂಧು-ಮಿತ್ರರು**
ಡಿ.ಸಿ.ಎಂ ಟೌನ್‌ಶಿಪ್, ದಾವಣಗೆರೆ.

## ಹಿಜಾಬ್ ವಿವಾದ : 6 ವಿದ್ಯಾರ್ಥಿನಿಯರ ಅಮಾನತ್ತು

ಮಂಗಳೂರು, ಜೂ. 2 – ಹೈಕೋರ್ಟ್ ಆದೇಶ ಹಾಗೂ ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ, ಹಿಜಾಬ್ ಧರಿಸಿದ್ದ ಆರು ವಿದ್ಯಾರ್ಥಿನಿಯರನ್ನು ಅಮಾನತ್ತುಗೊಳಿಸಿರುವ ಘಟನೆ ದಕ್ಷಿಣ ಕನ್ನಡ ಉಪ್ಪಿನಂಗಡಿಯ ಸ.ಪ್ರ.ದರ್ಜೆ ಕಾಲೇಜಿನಲ್ಲಿ ನಡೆದಿದೆ.

ಹಿಜಾಬ್ ಧರಿಸಿ ತರಗತಿಗಳಿಗೆ ಬರದಂತೆ ಪದೇ ಪದೇ ಎಚ್ಚರಿಕೆ ನೀಡಿದ್ದು ಫಲ ನೀಡಿರಲಿಲ್ಲ. ನಂತರ ಬೋಧಕರ ಜೊತೆ ಸಭೆ ನಡೆಸಿದ ಪ್ರಾಂಶುಪಾಲರು, ವಿದ್ಯಾರ್ಥಿನಿಯರನ್ನು ಒಂದು ವಾರದ ಕಾಲ ಅಮಾನತ್ತುಗೊಳಿಸಿದ್ದಾರೆ. ಅಮಾನತ್ತಿನ ಮರು ದಿನ ಗುರುವಾರ ಮತ್ತಷ್ಟು ವಿದ್ಯಾರ್ಥಿಗಳು ಹಿಜಾಬ್ ಧರಿಸಿ ಬಂದಿದ್ದರು. ಇದಕ್ಕೆ ಪ್ರತಿಯಾಗಿ ಇನ್ನೊಂದು ವರ್ಗದ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಪ್ರತಿಭಟಿಸಿ ದರು.

**ಪತ್ರಕರ್ತರ ಕ್ಯಾಮರಾ ಕಸಿದು ವಿಡಿಯೋ ಡಿಲೀಟ್ : ದೂರು**

ನಂತರ ಪೊಲೀಸರು ಮಧ್ಯ ಪ್ರವೇಶಿಸಿದರು. ಹಿಜಾಬ್ ಹಾಗೂ ಕೇಸರಿ ಶಾಲು ಧರಿಸಿದವರಿಬ್ಬರಿಗೂ ಅಧಿಕಾರಿಗಳು ಕಾಲೇಜಿನ ಒಳಗೆ ಪ್ರವೇಶ ನೀಡಲಿಲ್ಲ.

ಈ ನಡುವೆ, ಪ್ರಕರಣದ ವರದಿಗೆ ತೆರಳಿದ್ದ ಪತ್ರಕರ್ತರ ಮೇಲೆ ಕೆಲ ವಿದ್ಯಾರ್ಥಿಗಳು ದೌರ್ಜನ್ಯ ಎಸಗಿದ್ದಾರೆ. ಅವರ ಕ್ಯಾಮರಾಗಳನ್ನು ಕಸಿದು ವಿಡಿಯೋಗಳನ್ನು ಡಿಲೀಟ್ ಮಾಡಿದ್ದಾರೆ. ಈ ನಡುವೆ, ಮಂಗಳೂರಿನ ಯೂನಿವರ್ಸಿಟಿ ಕಾಲೇಜಿನಲ್ಲೂ 15 ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಬಂದಿದ್ದಾರೆ. ಅವರು ತರಗತಿಗಳಿಗೆ ಪ್ರವೇಶಿಸಲು ಅವಕಾಶ ನೀಡಿಲ್ಲ.

## ಪ್ರಥಮ ವರ್ಷದ ಪುಣ್ಯಸ್ಮರಣೆ




**ಶ್ರೀ ಮಾಗಾನಹಳ್ಳಿ ಅಶೋಕ್ ಕುಮಾರ್ (ಕೊಡಗನೂರು)**
(ನಿಧನ 03.06.2021)

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು...ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ...

ಪತ್ನಿ : ಶ್ರೀಮತಿ ಶಕುಂತಲಾ ಅಶೋಕ್ ಕುಮಾರ್
ಸಹೋದರ : ಮಾಗಾನಹಳ್ಳಿ ಅರುಣ್ ಕುಮಾರ್
ನಾದಿನಿ: ಶ್ರೀಮತಿ ಸುಧಾ ಅರುಣ್ ಕುಮಾರ್
ಪುತ್ರಿ : ಶ್ರೀಮತಿ ಶುಭ, ಅಳಿಯ : ಉಮಾಶಂಕರ್
ಪುತ್ರ : ಶಿವರಾಜ್, ಸೊಸೆ : ಶ್ರೀಮತಿ ಆಶಾ ಹಾಗೂ ಮೊಮ್ಮಕ್ಕಳು

## ಶಿವಕುಮಾರ್ ಡಿ.ಜಿ. ನಿಧನ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ 5th ಕ್ರಾಸ್ ವಾಸಿ. ಶಿವಕುಮಾರ್ ಡಿ.ಜಿ (69) ಇವರು, ದಿನಾಂಕ: 2.6.2022 ರ ಗುರುವಾರ ಮಧ್ಯಾಹ್ನ 2 ಕ್ಕೆ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರರು, ಓರ್ವ ಸೊಸೆ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 3.6.2022 ರಂದು ಶುಕ್ರವಾರ ಬೆಳಿಗ್ಗೆ 10:30 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ಎನ್.ಜಿ. ರಾಜಶೇಖರ್ ನಿಧನ



ದಾವಣಗೆರೆ ನಗರದ ಎಲ್ಐಸಿ ಕಾಲೋನಿ ವಿದ್ಯಾನಗರ ನಿವಾಸಿಯಾದ ಎನ್.ಜಿ. ರಾಜಶೇಖರ್ ಇವರು ದಿನಾಂಕ: 02.06.2022ರ ಗುರುವಾರ ಸಂಜೆ 6 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಮತ್ತು ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 03.06.2022 ಮಧ್ಯಾಹ್ನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ನಗರದಲ್ಲಿ ಇಂದು 'ಶರಣ ಸಂಗಮ'


ನಗರದ ಬಸವ ಕೇಂದ್ರ, ಶ್ರೀ ಮುರುಘರಾಜೇಂದ್ರ ವಿರಕ್ತಮಠ, ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ಇವರ ಆಶ್ರಯದಲ್ಲಿ ಇಂದು ಸಂಜೆ 6.30 ಕ್ಕೆ ನಗರದ ಮುರುಘರಾಜೇಂದ್ರ ವೃತ್ತದಲ್ಲಿರುವ ಬಸವ ಕೇಂದ್ರ, ಶಿವಯೋಗಾಶ್ರಮದಲ್ಲಿ ಶರಣ ಸಂಗಮ ಕಾರ್ಯಕ್ರಮ ನಡೆಯುವುದು. ಇಂದಿನ ವಿಷಯ : ಗುರುತ್ವ-ವಿಶ್ವಮಾನವತ್ವ ಸಾಧ್ಯವೇ?

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿತ್ರದುರ್ಗ ಬೃಹನ್ಮಠದ ಪೀಠಾಧ್ಯಕ್ಷರಾದ ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ವಹಿಸುವರು. ದಾವಣಗೆರೆಯ ಶ್ರೀ ವಿರಕ್ತಮಠದ ಶ್ರೀ ಬಸವ ಪ್ರಭು ಸ್ವಾಮೀಜಿಯವರ ಸಮ್ಮುಖದಲ್ಲಿ ನಡೆಯಲಿದೆ.

ಟಿ.ಎಂ. ಚಂದ್ರಶೇಖರ್, ಶ್ರೀಮತಿ ಸುಶೀಲಮ್ಮ, ಡಾ. ಜಯಣ್ಣ ಕಂಚಿಕೆರೆ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಕಾರ್ಯಕ್ರಮದಲ್ಲಿ ಡಾ. ರುದ್ರಮುನಿ ಹಿರೇಮಠ ಉಪನ್ಯಾಸ ನೀಡುವರು.

ಕಾರ್ಯಕ್ರಮದಲ್ಲಿ 'ಸುರಪುರದ ವೀರ ವನಿತೆ' ನಾಟಕ ಭುವನೇಶ್ವರಿ ನಾಟ್ಯ ಕಲಾಸಂಘದವರಿಂದ ನಡೆಯುವುದು. ಬಸವ ಕಲಾಲೋಕದ ಚೇತನ ಅವರು ಸುಗಮ ಸಂಗೀತ ಒದಗಿಸುವರು.

## ಪ್ರಥಮ ವರ್ಷದ ಪುಣ್ಯಸ್ಮರಣೆ




**ದಿ|| ಶ್ರೀಮತಿ ಯರಗುಂಟಿ ಹಾಲಮ್ಮ**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಮಾರ್ಗದರ್ಶನ ನಮ್ಮ ಹೃದಯಗಳಲ್ಲಿ ಹಚ್ಚ-ಹಸಿರಾಗಿದೆ,
ಅನುಕ್ಷಣವು ನಿಮ್ಮ ಸ್ಮರಣೆಯೇ ನಮಗೆ ದಿವ್ಯ ಚೇತನ.
ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವೆವು

**ಶ್ರೀ ಯರಗುಂಟಿ ಎಂ. ಭೀಮಪ್ಪ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದವರು ಮತ್ತು ಬಂಧು-ಮಿತ್ರರು. ದಾವಣಗೆರೆ.**

## ಕಾರಿಗನೂರು ಮಠದ ಶ್ರೀಮತಿ ಸರೋಜಮ್ಮ ನಿಧನ



ದಾವಣಗೆರೆ ಕೆ.ಬಿ. ಬಡಾವಣೆ, ಲಾಯರ್ ರಸ್ತೆ ವಾಸಿ ದಿ. ಕಾರಿಗನೂರು ಮಠದ ಲಿಂ. ರಾಜಶೇಖರಯ್ಯನವರ ಧರ್ಮಪತ್ನಿ

**ಶ್ರೀಮತಿ ಸರೋಜಮ್ಮ**

ಇವರು ದಿನಾಂಕ : 02.06.2022ರ ಗುರುವಾರ ಸಂಜೆ 5.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 57 ವರ್ಷ ವಯಸ್ಸಾಗಿತ್ತು. ತಾಯಿ, ಓರ್ವ ಪುತ್ರಿ, ಸಹೋದರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 03.06.2022ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ

**ಶ್ರೀಮತಿ ದ್ರಾಕ್ಷಾಯಣಮ್ಮ ಮತ್ತು ಮಕ್ಕಳು**
**ಕಾರಿಗನೂರು ಮಠದ ವಂಶಸ್ಥರು**
**ಮೊ: 98862 42527,96860 32827**

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಜೂನ್ 03, 2022


## ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸೂಕ್ತ ಮಾರ್ಗದರ್ಶನ ಮುಖ್ಯ

### ಯುಪಿಎಸ್‌ಸಿ ಪರೀಕ್ಷೆಯಲ್ಲಿ 31ನೇ ರ್‍ಯಾಂಕ್ ಪಡೆದ ಅವಿನಾಶ್ ಸಲಹೆ

ದಾವಣಗೆರೆ, ಜೂ.2- ಆಸಕ್ತಿ ಇರುವ ವಿಷಯವನ್ನೇ ಆಯ್ಕೆ ಮಾಡಿಕೊಳ್ಳುವುದು. ಓದುವ ವಿಷಯದಲ್ಲಿ ಶಿಸ್ತು, ಯೋಗ-ಧ್ಯಾನ ಸೇರಿದಂತೆ ಪಠ್ಯೇತರ ಚಟುವಟಿಕೆಗಳಲ್ಲೂ ಆಸಕ್ತಿ ಹೊಂದುವುದು, ಪತ್ರಿಕೆಗಳನ್ನು ಓದುವ ಅಭ್ಯಾಸ ಮೈಗೂಡಿಸಿಕೊಂಡು ಸಾಮಾನ್ಯ ಜ್ಞಾನ ಹೆಚ್ಚಿಸಿಕೊಂಡು ಸೂಕ್ತ ಮಾರ್ಗದರ್ಶನದಿಂದ ಮುನ್ನಡೆದರೆ ಯಶಸ್ಸು ಸಾಧಿಸಬಹುದು.

ಯು.ಪಿ.ಎಸ್.ಸಿ. ಪರೀಕ್ಷೆಯಲ್ಲಿ ರಾಷ್ಟ್ರ ಮಟ್ಟದಲ್ಲಿ 31ನೇ ರ್‍ಯಾಂಕ್ ಪಡೆದು, ರಾಜ್ಯಮಟ್ಟದಲ್ಲಿ ಮೊದಲಿಗರಾಗಿರುವ ಅವಿನಾಶ್ ವಿ. ರಾವ್ ಅವರ ಮಾತುಗಳಿವು.



ಜಿಲ್ಲಾ ವರದಿಗಾರರ ಕೂಟದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಂವಾದ ಕಾರ್ಯಕ್ರಮದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪೋಷಕರ ಒತ್ತಾಯಕ್ಕೋ ಅಥವಾ ಯಾವುದೋ ವಿಷಯದಲ್ಲಿ ಹೆಚ್ಚಿನ ಅಂಕಗಳು ಬಂದಿವೆ ಎಂದು ಅದೇ ವಿಷಯ ಆಯ್ಕೆ ಮಾಡಿಕೊಳ್ಳುವ ಬದಲು ತಮಗೆ ಆಸಕ್ತಿ ಇರುವ ವಿಷಯವನ್ನೇ ಆಯ್ಕೆ ಮಾಡಿಕೊಳ್ಳುವುದು ಸೂಕ್ತ ಎಂದು ಹೇಳಿದರು.

ದಿನಕ್ಕೆ 6 ರಿಂದ 7 ತಾಸು ಓದುತ್ತಿದ್ದೆ. ಜೊತೆಗೆ ಯೋಗ ಮಾಡುತ್ತಿದ್ದೆ. ಪೋಷಕರ ಸಹಕಾರ ಹಾಗೂ ಆಶೀರ್ವಾದದಿಂದ ಯಶಸ್ಸು ನನ್ನದಾಯಿತು ಎಂದು ಸಂತಸ ಹಂಚಿಕೊಂಡರು.

ಕೊರೊನಾ ಸಂಕಷ್ಟದಲ್ಲಿ ಜನರು ಅನುಭವಿಸಿದ ನೋವು, ಅಧಿಕಾರಿಗಳ ಸ್ಪಂದನೆ, ಇತ್ತೀಚಿನ ರಷ್ಯಾ - ಉಕ್ರೇನ್ ಯುದ್ಧದ ವೇಳೆ ಭಾರತೀಯರನ್ನು ಮರಳಿ ತರಲು ಶ್ರಮಿಸಿದ ರಾಯಭಾರಿಗಳ ಕೆಲಸ ಇವುಗಳನ್ನು ನೋಡಿ ವಿದೇಶಾಂಗ ಇಲಾಖೆಯಲ್ಲಿ ಸೇವೆ ಸಲ್ಲಿಸಲು (4ನೇ ಪುಟಕ್ಕೆ)

### ಉತ್ತಮ ಸ್ನೇಹಿತರಿರಲಿ

ವಿದ್ಯಾರ್ಥಿ ಜೀವನದಲ್ಲಿ ಉತ್ತಮ ಸ್ನೇಹಿತರ ಆಯ್ಕೆಯೂ ಮುಖ್ಯ ಎಂದು ಅವಿನಾಶ್ ಹೇಳಿದರು. ಸಮಯ ವ್ಯರ್ಥ ಮಾಡುವ ಸ್ನೇಹಿತರ ಬದಲಾಗಿ ಓದಿನಲ್ಲಿ ಆಸಕ್ತಿ ಇರುವ ಸ್ನೇಹಿತರನ್ನು ಆಯ್ಕೆ ಮಾಡಿಕೊಂಡಾಗ ವಿಷಯಗಳನ್ನು ಚರ್ಚಿಸಲು ಅನುಕೂಲವಾಗುತ್ತದೆ. ಅವರ ಓದು ನಮಗೂ ಪ್ರೇರಣೆಯಾಗುತ್ತದೆ ಎಂದು ಹೇಳಿದರು.

## ರೈತರ ಉತ್ಪನ್ನಗಳಿಗೆ ಮೌಲ್ಯಯುತ ಬೆಲೆ, ನೀರು ಕೊಡಿ ರೈತರು ದೇಶದ ಸಾಲ ತೀರಿಸುವಷ್ಟು ಸಮರ್ಥರು

### ದೇವಭೂಮಿ ಹಿಮಾಚಲ ಪ್ರದೇಶದ ಸೋಲನ್ ಕೃಷಿ ವಿಜ್ಞಾನ ಕೇಂದ್ರಗಳ ಸಮ್ಮೇಳನದಲ್ಲಿ ಶ್ರೀ ತರಳಬಾಳು ಜಗದ್ಗುರುಗಳವರ ಸಲಹೆ

ಸೋಲನ್, ಜೂ.2- ರೈತರು ಈ ದೇಶದ ಆಸ್ತಿ. ಶ್ರಮಜೀವಿಗಳಾದ ಅವರು ಇನ್ನೊಬ್ಬರಿಗೆ ಕೈ ಚಾಚುವಂತಾಗಬಾರದು. ಸರ್ಕಾರ ರೈತರ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ಮತ್ತು ಕೃಷಿ ಭೂಮಿಗೆ ನೀರನ್ನು ಸಮರ್ಪಕವಾಗಿ ನೀಡಿದರೆ ದೇಶದ ಸಾಲವನ್ನು ತೀರಿಸುತ್ತಾರೆ ಎಂದು ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ನುಡಿದರು.

ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಮಂಡಳಿ ಮತ್ತು ಡಾ. ಯಶವಂತ್ ಸಿಂಗ್ ಪರ್ಮಾರ್ ತೋಟಗಾರಿಕೆ ಮತ್ತು ಅರಣ್ಯ ವಿಶ್ವವಿದ್ಯಾಲಯವು ಸೋಲನ್ ನಗರದಲ್ಲಿ ಜಂಟಿಯಾಗಿ ಏರ್ಪಡಿಸಿದ್ದ ಕೃಷಿ ವಿಜ್ಞಾನ ಕೇಂದ್ರಗಳ 12 ನೇ ದ್ವೈವಾರ್ಷಿಕ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿದ ಶ್ರೀಗಳು ತಮ್ಮ ಭಾಷಣದಲ್ಲಿ ರೈತಪರ ಕಾಳಜಿ ವ್ಯಕ್ತಪಡಿಸಿದರು.



ಈ ಸಂದರ್ಭದಲ್ಲಿ ಕರ್ನಾಟಕದಲ್ಲಿ ತಾವು ಕೈಗೊಂಡಿರುವ 20 ಕ್ಕೂ ಹೆಚ್ಚು ಏತ ನೀರಾವರಿ ಯೋಜನೆಗಳ ಮೂಲಕ 500 ಕ್ಕೂ ಅಧಿಕ ಕೆರೆಗಳಿಗೆ ನೀರು ತುಂಬಿಸುವ ಕಾರ್ಯಗಳನ್ನು ಕುರಿತ ಸಾಕ್ಷ್ಯಚಿತ್ರವನ್ನು ಶ್ರೀಗಳು ಪ್ರದರ್ಶಿಸಿದರು. ಕರ್ನಾಟಕದಲ್ಲಿ ಬೆಳೆ ಸಮೀಕ್ಷೆಗೆ ಹೊರತಂದಿರುವ ಭೂಮಿ ಆನ್ಲೈನ್ ತಂತ್ರಾಂಶವನ್ನು 2018ರಲ್ಲಿ ರೂಪಿಸಿದ್ದು, ಇದು ರಾಷ್ಟ್ರಕ್ಕೆ ಮಾದರಿಯಾಗಿದೆ. ಈ ತಂತ್ರಾಂಶದಿಂದ ಮಧ್ಯವರ್ತಿಗಳ ಹಾವಳಿ (4ನೇ ಪುಟಕ್ಕೆ)

## 2014ರ ನಂತರ ವಿಶ್ವದಲ್ಲಿ ದೇಶದ ಗೌರವ ಹೆಚ್ಚಾಗಿದೆ : ನವೀನ್

ದಾವಣಗೆರೆ, ಜೂ. 2 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ 2014ರಲ್ಲಿ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರದ ಎಂಟು ವರ್ಷಗಳಲ್ಲಿ ವಿಶ್ವದಾದ್ಯಂತ ಭಾರತದ ಗೌರವ ಹೆಚ್ಚಾಗಿದೆ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ ಹಾಗೂ ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್ ಹೇಳಿದ್ದಾರೆ.

ಮೋದಿ ಸರ್ಕಾರಕ್ಕೆ ಎಂಟು ವರ್ಷ ತುಂಬಿದ ಹಿನ್ನೆಲೆಯಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಉಕ್ರೇನ್ ಸಮರದ ಸಮಯದಲ್ಲಿ ಅಲ್ಲಿದ್ದ ದೇಶದ 20 ಸಾವಿರ ವಿದ್ಯಾರ್ಥಿಗಳ ರಕ್ಷಣೆಗಾಗಿ 6 ಗಂಟೆ ಕಾಲ ಸಮರ ನಿಲ್ಲುವಂತೆ ರಷ್ಯಾ ಹಾಗೂ ಉಕ್ರೇನ್‌ಗಳ ಮನವೊಲಿಸಲಾಗಿತ್ತು.

ಅಭಿವೃದ್ಧಿ ಹೊಂದಿದ ದೇಶಗಳಿಗೂ ಸವಾಲೆನಿಸಿದ್ದ ಕ್ಲಿಷ್ಟಕರ ಪರಿಸ್ಥಿತಿಯಲ್ಲೂ ದೇಶದ ಘನತೆಯನ್ನು ಎತ್ತಿ ಹಿಡಿದಿರುವ ಮೋದಿ ವಿಶ್ವ ನಾಯಕರಾಗಿದ್ದಾರೆ ಎಂದರು.

ಕಳೆದ ಎಂಟು ವರ್ಷಗಳಲ್ಲಿ ಕೃಷಿ ಬಜೆಟ್ ಆರು ಪಟ್ಟು ಹೆಚ್ಚಾಗಿದೆ ಎಂದ ಅವರು,

ಆಯುಷ್ಮಾನ್ ಭಾರತ ಯೋಜನೆ, ಉಜ್ವಲ ಯೋಜನೆ, ಜನ್ ಧನ್ ಯೋಜನೆ, ಕಿಸಾನ್ ಸಮ್ಮಾನ್ ನಿಧಿ, ವಿಮಾ ಯೋಜನೆ, ಎಲ್ಲರಿಗೂ ಮನೆ, ಸ್ವಚ್ಛ ಭಾರತ್ ಹಾಗೂ ಮುದ್ರಾ ಎಂಬ ಎಂಟು ಯೋಜನೆಗಳು ಪ್ರಮುಖವಾಗಿ ಜಾರಿಗೆ ಬಂದಿವೆ ಎಂದು ಹೇಳಿದರು.

ದೇಶದ ಜಿ.ಡಿ.ಪಿ. ಗಾತ್ರ ಈಗ ಕೊರೊನಾ ಮುಂಚಿನ ದಿನಗಳನ್ನು ದಾಟಿ ಹೆಚ್ಚಾಗಿದೆ. ಕಳೆದ ವರ್ಷ ಶೇ.9ರ ಬೆಳವಣಿಗೆಯಾಗಿದ್ದು, ಇದು ವಿಶ್ವದ ಮುಂಚೂಣಿ ದೇಶಗಳಲ್ಲಿ ಒಂದಾಗಿದೆ ಎಂದವರು ಹೇಳಿದರು.

ಮೋದಿ ಸರ್ಕಾರದ ಎರಡನೇ ಅವಧಿಯಲ್ಲಿ ನಿರೀಕ್ಷೆಗೂ ಮೀರಿದ ಸಾಧನೆಯಾಗಿದೆ ಎಂದು ಲೋಕಲ್ ಸರ್ಕಲ್ಸ್ ಎಂಬ ಸಂಸ್ಥೆ (5ನೇ ಪುಟಕ್ಕೆ)

## ಕಲಬುರಗಿ, ಹಾವೇರಿಯಲ್ಲಿ ರೇಷ್ಮೆ ಗೂಡು ಮಾರುಕಟ್ಟೆ

ಬೆಂಗಳೂರು, ಜೂ. 2 - ಕಲಬುರಗಿ ಮತ್ತು ಹಾವೇರಿಯಲ್ಲಿ ರೇಷ್ಮೆ ಗೂಡು ಮಾರುಕಟ್ಟೆ ನಿರ್ಮಾಣಕ್ಕೆ ಭೂಮಿ ಹಂಚಿಕೆ ಆಗಿದ್ದು, ಜೂನ್ ಅಂತ್ಯದೊಳಗೆ ಡಿ.ಪಿ.ಆರ್. ಸಿದ್ಧಪಡಿಸುವಂತೆ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಅವರು ಇಂದು ರೇಷ್ಮೆ ಇಲಾಖೆ ಆಯವ್ಯಯ ಅನುಷ್ಠಾನದ ಪ್ರಗತಿ ಪರಿಶೀಲನೆ (4ನೇ ಪುಟಕ್ಕೆ)

## ಕಿಸಾನ್ : ರೈತರಿಗೆ 956 ಕೋಟಿ ಬಿಡುಗಡೆ

ಬೆಂಗಳೂರು, ಜೂ. 2 - ಮುಖ್ಯಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದು ರಾಜ್ಯದ 47.83 ಲಕ್ಷ ರೈತರಿಗೆ 956.71 ಕೋಟಿ ರೂ.ಗಳ ಆರ್ಥಿಕ ಸಹಾಯ ಧನ ವರ್ಗಾಯಿಸಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ (4ನೇ ಪುಟಕ್ಕೆ)


|| ಶ್ರೀ ವಿತರಾಗಾಯ ನಮಃ || || ಶ್ರೀ ಪದ್ಮಾವತಿದೇವಿ ಪ್ರಸನ್ನ ||

**ಐದನೇ ವರ್ಷದ ಚಿರಸ್ಮರಣೆ**



ದಿ. ಶ್ರೀಮತಿ ಬೇತೂರು ವಿನೋದಮ್ಮ
ಜನನ: 19-05-1944
ನಿಧನ: 03-06-2017

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳು ಕಳೆದವು. ಸದಾ ನಿಮ್ಮ ಸ್ಮರಣೆಯಲ್ಲಿರುವ:

ಪುತ್ರಿ: ಶ್ರೀಮತಿ ಬಿ.ಕೆ. ಅರ್ಚನಾ,
ಅಳಿಯ : ಶ್ರೀ ಡಿ. ಮಹಾವೀರ್,
ಪ್ರೀತಿಯ ಮೊಮ್ಮಗಳು : ಕು|| ಎಂ. ಲಕ್ಷ್ಮಿ,
ಪದ್ಮಾಂಬ ಕಾಂಪ್ಲೆಕ್ಸ್,(ಬೇತೂರು ಕುಬೇರಪ್ಪ) ದಾವಣಗೆರೆ.
ಬೇತೂರು ಕುಟುಂಬ ವರ್ಗದವರು
ಶ್ರೀ ಮಹಾವೀರ ಆಟೋಮೊಬೈಲ್ಸ್, ರಾಣೇಬೆನ್ನೂರು.



**ಪ್ರಥಮ ವರ್ಷದ ಪುಣ್ಯಸ್ಮರಣೆ**



ಜನನ: 03.06.1951
ಮರಣ: 03.06.2021

**ದಿ. ಶ್ರೀ ಅಜ್ಜಪ್ಪ ಪವಾರ್**

ಉಪಾಧ್ಯಕ್ಷರು, ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘ
ಅಧ್ಯಕ್ಷರು, 17ನೇ ವಾರ್ಡ್ ಕಾಂಗ್ರೆಸ್ ಸಮಿತಿ

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಧರ್ಮಪತ್ನಿ: ಶ್ರೀಮತಿ ಮಂಜುಳಾಬಾಯಿ ದಿ|| ಶ್ರೀ ಅಜ್ಜಪ್ಪ ಪವಾರ್
ಪುತ್ರಿ: ಕುಮಾರಿ ನಳಿನ, Software Engineer U.K.
ಪುತ್ರ-ಸೊಸೆ: ಶ್ರೀಮತಿ ಅಂಬಿಕ ಶ್ರೀ ಮಾಲತೇಶ ಪವಾರ್
ಪುತ್ರ-ಸೊಸೆ: ಶ್ರೀಮತಿ ರೂಪ ಶ್ರೀ ಸತೀಶ್ ಪವಾರ್, ಶ್ರೀಗಣೇಶ್ ಸ್ಟೀಲ್ಸ್ ಅಂಡ್ ಸಿಮೆಂಟ್
ಸೊಸೆ: ಸುಮಿತ್ರಬಾಯಿ ಲಕ್ಷ್ಮಣ್ ಪವಾರ್,
ಮಗಳು: ಶ್ರೀಮತಿ ನಂದಿನಿ ಶ್ರೀ ಕೋಟೇಶ್
ಮಗ- ಸೊಸೆ: ಶ್ರೀ ಮಧು ಪವಾರ್ ಶ್ರೀಮತಿ ಸಹನ
ಶ್ರೀಮತಿ ನಾಗಮ್ಮಬಾಯಿ ದಿ|| ಶ್ರೀ ರಾಮಪ್ಪ ಪವಾರ್ ಮತ್ತು ಮಕ್ಕಳು
ಅಮೋಘ, ಪ್ರತೀಕ್, ಪ್ರಣವ್,
ಸಾನಿಕ, ಸಮನ್ವಿ ಪವಾರ್ ಹಾಗೂ ಬಂಧು-ಮಿತ್ರರು



**ಅಭಿನಂದನೆಗಳು**

**ಇಂದು ಶುಭಾರಂಭ**





ಶ್ರೀ ರಾಜಕುಮಾರ್ ಪೈ.
ಎಂ.ಡಿ., ಪೈ ಇಂಟರ್‌ನ್ಯಾಷನಲ್

**ಪೈ ಇಂಟರ್‌ನ್ಯಾಷನಲ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್**

ಎ.ವಿ.ಕೆ. ಕಾಲೇಜು ರಸ್ತೆ, ಚೇತನ ಹೋಟೆಲ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ.

ದಿನಾಂಕ 03.06.2022ರ ಶುಕ್ರವಾರ
ಸಮಯ: ಬೆಳಿಗ್ಗೆ 10.30ಕ್ಕೆ



ಅತ್ಯುತ್ತಮವಾಗಿ ನಿರ್ಮಿಸಿರುವ ನಮ್ಮ ಆತ್ಮೀಯ ಸ್ನೇಹಿತರಾದ
ದಾವಣಗೆರೆ ಎಸ್.ಆರ್. ಅಸೋಸಿಯೇಟ್ಸ್‌ನ
ಇಂ|| ಶಿವಕುಮಾರ್ ಬಿ.ಹೆಚ್.
ಅವರಿಗೆ ಹೃದಯಪೂರ್ವಕ ಅಭಿನಂದನೆಗಳು ಮತ್ತು ಶೋ ರೂಂ ನಿರ್ಮಾಣಕ್ಕೆ ಪ್ರತ್ಯಕ್ಷ - ಪರೋಕ್ಷವಾಗಿ ಸಹಕರಿಸಿದ ಎಸ್.ಆರ್. ಅಸೋಸಿಯೇಟ್ಸ್‌ನ ಸಿಬ್ಬಂದಿ ವರ್ಗದವರಿಗೂ ಹೃತ್ಪೂರ್ವಕ ಧನ್ಯವಾದಗಳು.

ನೂತನ ಶೋ ರೂಂಗೆ ಶುಭಾಶಯಗಳು

♦ ಜೆ. ಈಶ್ವರ್‌ಸಿಂಗ್ ಕವಿತಾಳ, ಮಾಲೀಕರು, ಬಿಂದಾಸ್ ಗ್ರೂಪ್, ದಾವಣಗೆರೆ.
♦ ಡಾ|| ಪ್ರವೀಣ್ ಅಂಬರ್‌ಕರ್, ♦ ಡಾ|| ರುದ್ರೇಶ್ ಹೆಚ್.ಕೆ. ಅಶ್ವಿನಿ ಕ್ಲಿನಿಕ್,
♦ ಸೋಮಶೇಖರ್ ಪವಾರ್, ರೇಣು ಪೇಂಟ್ಸ್, ♦ ನಿರಂಜನ್ ಬಿ.ಎಂ. ಕರ್ನಾಟಕ ಇಂಜಿನಿಯರಿಂಗ್ ಕನ್ಸಲ್ಟೆನ್ಸಿ
♦ ದಿಗ್ವಿಜಯ್ ಹತ್ತಿ, ಡೆವಲಪರ್ಸ್ ♦ ಚಿದಂಬರ ಜೋಷಿ, ಫೈನಾನ್ಷಿಯಲ್ ಅಡ್ವೈಜರ್
♦ ಡಿ. ಮಂಜುನಾಥ್, ಶ್ರೀನಿಧಿ ಮ್ಯಾಚಿಂಗ್ ಸೆಂಟರ್
♦ ಪೃಥ್ವಿ ಹೆಚ್.ಎಂ. ♦ ಸಾಗರ್ ಡಿ.ಎಸ್. ♦ ಶಶಾಂಕ್ ಜಿ.ಎಂ.
♦ ಪ್ರಸನ್ನ ಬಿ.ಎಸ್. ♦ ಕು. ಸರ್ವಮಂಗಳ ಬಿ.ಎಸ್.
♦ ಹೃತಿಕ್ ಸಿಂಗ್ ಜೆ.ಇ. ♦ ಕು. ಹೃಷಿಕಸಿಂಗ್ ಜೆ.ಇ. ♦ ಕು. ಪಾವನಿ
♦ ಬ್ರೋನಿ ಮತ್ತು ಸ್ಯಾಂಡಿ, ♦ ಬೂದಿಹಾಳ ಮಠ ಕುಟುಂಬಸ್ಥರು, ಬ್ಯಾಡಗಿ

S.R. ASSOCIATES
ENGINEERS & CONTRACTORS

**ಕುಂದುವಾಡ ಕೆರೆ ವಾಯುವಿಹಾರ ಬಳಗ ಮತ್ತು ಟೀ ಲಾಂಚ್ ಗೆಳೆಯರ ಬಳಗ**

# ಪಂಚಾಯ್ತಿ ಮಟ್ಟದಲ್ಲೇ ಅಭ್ಯರ್ಥಿ ಆಯ್ಕೆ

**ಕಾಂಗ್ರೆಸ್ ಚಿಂತನಾ ಸಭೆಯಲ್ಲಿ ನಾಯಕರ ಘೋಷಣೆ**

ಬೆಂಗಳೂರು, ಜೂ.2 - ಮುಂಬರುವ ವಿಧಾನಸಭೆ ಚುನಾವಣೆಗೆ ಪಕ್ಷದ ವತಿಯಿಂದ ಸ್ಪರ್ಧಿಸುವ ಅಭ್ಯರ್ಥಿಗಳ ಆಯ್ಕೆಯನ್ನು ಪಂಚಾಯತ್ ಮಟ್ಟದಲ್ಲೇ ನಡೆಸಲು ಪ್ರದೇಶ ಕಾಂಗ್ರೆಸ್ ನಿರ್ಧರಿಸಿದೆ.

ನಗರದ ಹೊರ ವಲಯದಲ್ಲಿ ನಡೆಯುತ್ತಿರುವ ಎರಡು ದಿನಗಳ (ಕ್ಲಾರ್ಕ್ಸ್ ಎಕ್ಸಾಟಿಕ) ಚಿಂತನ ಮಂಥನ ಶಿಬಿರದಲ್ಲಿ ಮಾತನಾಡಿದ ನಾಯಕರು, ಪಕ್ಷಕ್ಕೆ ದುಡಿದ ಹಾಗೂ ಯುವಕರಿಗೆ ಈ ಬಾರಿ ಅವಕಾಶ ಎಂಬ ಸಂದೇಶ ನೀಡಿದ್ದಾರೆ.

ರಾಜ್ಯ ಉಸ್ತುವಾರಿ ಹೊಣೆ ಹೊತ್ತಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವ ಕುಮಾರ್ ಮಾತನಾಡಿ, ಉದಯಪುರದಲ್ಲಿ ತೆಗೆದುಕೊಂಡಿರುವ ನಿರ್ಣಯದಂತೆ ಶೇ.50 ರಷ್ಟು, ಕ್ಷೇತ್ರಗಳು ಯುವ ಸಮುದಾಯಕ್ಕೆ ಮೀಸಲು. ಅಷ್ಟೇ ಅಲ್ಲ, ಎಲ್ಲ ಸಮುದಾಯದ ವರಿಗೂ ಅವಕಾಶ ಮಾಡಿಕೊಡುತ್ತೇವೆ ಎಂದಿದ್ದಾರೆ.

ಕರ್ನಾಟಕದಲ್ಲಿ ಬಿಜೆಪಿ ಭ್ರಷ್ಟ ಆಡಳಿತವನ್ನು ಮನೆ ಮನೆಗೆ ತಲುಪಿಸುವ ಕಾರ್ಯವನ್ನು ಯುವಕರು ಮಾಡಬೇಕು.

ಯಾರು ಸಕ್ರಿಯ ಕಾರ್ಯಶೀಲರಾಗಿ ಪಕ್ಷ ಸಂಘಟನೆ ಮಾಡುವರೋ ಅವರೇ ನಮ್ಮ ಅಭ್ಯರ್ಥಿ ಎಂದಿದ್ದಾರೆ.

ಬಿಜೆಪಿ ಸರ್ಕಾರದ ವೈಫಲ್ಯಗಳ ವಿರುದ್ಧ ಕ್ವಿಟ್ ಇಂಡಿಯಾ ಚಳವಳಿ ಮಾದರಿಯಲ್ಲಿ ಆಗಸ್ಟ್ 9 ರಿಂದ ರಾಜ್ಯಾದ್ಯಂತ ಭಾರೀ ಹೋರಾಟ ನಡೆಸಲು ಕಾಂಗ್ರೆಸ್ ನಾಯಕರು ನಿರ್ಧರಿಸಿದ್ದಾರೆ.

ಮಹಿಳೆಯರು, ವಿದ್ಯಾರ್ಥಿಗಳು ಮತ್ತು ಎಲ್ಲ ವರ್ಗದ ಜನರು ಸೇರಿ ರಾಜ್ಯದ ಜಿಲ್ಲೆ-ಜಿಲ್ಲೆಗಳಲ್ಲಿ ಪಾದಯಾತ್ರೆ ನಡೆಸಿ ಬಿಜೆಪಿ ಸರ್ಕಾರದ ದುರಾಡಳಿತ ಮತ್ತು ವೈಫಲ್ಯಗಳನ್ನು ಜನರಿಗೆ ತಿಳಿಸಲು ಸೂಚಿಸಿದ್ದಾರೆ.

# ನಮ್ಮನ್ನು ಟುರ್ಕಿಯೆ ಎನ್ನಿರಿ ಎಂದ ಟರ್ಕಿ

ಅಂಕಾರಾ, ಜೂ. 2 – ತಮ್ಮ ದೇಶವನ್ನು ಟರ್ಕಿ ಎನ್ನುವ ಬದಲು ಟುರ್ಕಿಯೆ ಎಂದು ಕರೆಯುವಂತೆ ವಿಶ್ವಸಂಸ್ಥೆಗೆ ಆ ದೇಶ ಪತ್ರ ಬರೆದಿದೆ. 'ಟುರ್ಕಿಯೆ' ವರ್ಚಸ್ಸು ಬದಲಿಸಿಕೊಳ್ಳುವ ಭಾಗವಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳಲಾಗುತ್ತಿದೆ. ಬಹುತೇಕ ಟರ್ಕರು ತಮ್ಮ ದೇಶವನ್ನು ಟುರ್ಕಿಯೆ ಎಂದು ಕರೆದುಕೊಳ್ಳುತ್ತಾರೆ. ಆದರೆ, ಆಂಗ್ಲೀಕರಣದ ಟರ್ಕಿ ಎಂಬ ಪದ ವಿಶ್ವದಾದ್ಯಂತ ಪ್ರಚಲಿತದಲ್ಲಿದೆ. ಆ ದೇಶದ ಕೆಲವರೂ ಸಹ ಟರ್ಕಿ ಎಂಬ ಪದ ಬಳಸುತ್ತಾರೆ.

# ರಾಗಿ ಖರೀದಿ ವಿಳಂಬ ರಸ್ತೆ ತಡೆದು ಪ್ರತಿಭಟಿಸಿದ ರೈತರು




ಹರಪನಹಳ್ಳಿ, ಜೂ.2- ಎಪಿಎಂಸಿಯಲ್ಲಿ ತೆರೆಯಲಾದ ರಾಗಿ ಖರೀದಿ ಕೇಂದ್ರದಲ್ಲಿ ರೈತರ ರಾಗಿಯನ್ನು ಖರೀದಿಸಲು ವಿಳಂಬ ಧೋರಣೆ ಅನುಸರಿಸಲಾಗುತ್ತಿದ್ದು, ಕೂಡಲೇ ಖರೀದಿಸಲು ಕ್ರಮ ವಹಿಸಬೇಕು ಎಂದು ಆಗ್ರಹಿಸಿ ಹರಪನಹಳ್ಳಿ-ಕೊಟ್ಟೂರು ರಸ್ತೆಯನ್ನು ಬಂದ್ ಮಾಡಿ ಪ್ರತಿಭಟನೆ ಮಾಡಿದ ಘಟನೆ ನಡೆಯಿತು.

ರಾಗಿ ಖರೀದಿಸಲು ನೋಂದಣಿ ಮಾಡಿಕೊಂಡ ರೈತರಿಗೆ ಟೋಕನ್ ನೀಡಿದ್ದಾರೆ. ಟೋಕನ್ ಪ್ರಕಾರ ರೈತರ ರಾಗಿಯನ್ನು ತೆಗೆದುಕೊಳ್ಳಲಾಗುತ್ತಿದೆ. ಆದರೂ ಸಮರ್ಪಕವಾದ ಲಾರಿಗಳು ಇಲ್ಲದ ಕಾರಣ ರಾಗಿ ಚೀಲ ಹೊತ್ತ ಟ್ರ್ಯಾಕ್ಟರ್‌ಗಳು ಎಪಿಎಂಸಿ ಪ್ರಾಂಗಣದಲ್ಲಿ ಸಾಲುಗಟ್ಟಿ ನಿಂತು ಸ್ಥಳ ಇಲ್ಲದಂತಾಗಿ ರೈತರು ಪರದಾಡುವಂತಾಗಿತ್ತು.

ರೈತರಿಗೆ ಬಿತ್ತನೆ ಕಾರ್ಯಗಳು ಇದ್ದು, ಬಿತ್ತನೆಗೆ ಸಿದ್ದತೆಗೊಳಿಸಲು ಟ್ರ್ಯಾಕ್ಟರ್ ಯಂತ್ರಗಳು ಇಲ್ಲದೆ ಕಳೆದ ನಾಲ್ಕೈದು ದಿನಗಳಿಂದ ರಾಗಿಯನ್ನು ಟ್ರ್ಯಾಕ್ಟರ್‌ನಲ್ಲಿ ತುಂಬಿಕೊಂಡು ಬಂದಿದ್ದೇವೆ, ಆದರೆ ಸಮರ್ಪಕವಾದ ಲಾರಿಗಳು ಇಲ್ಲದೆ ಕಾಲಹರಣ ಮಾಡಬೇಕಾದ ಪರಿಸ್ಥಿತಿ ಎದುರಾಗಿದ್ದು, ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಕ್ರಮ ವಹಿಸಬೇಕು ಎಂದು ರೈತ ಸಂಘಟನೆಗಳು ಹಾಗೂ ರೈತರು ಪಟ್ಟು ಹಿಡಿದು ರಸ್ತೆಯಲ್ಲಿ ವಾಹನಗಳನ್ನು ತಡೆದು ಪ್ರತಿಭಟನೆಯನ್ನು ಒಂದು ಗಂಟೆಗಳ ಕಾಲ ಮುಂದುವರೆಸಿದರು.

ಸುದ್ದಿ ತಿಳಿದ ತಹಶೀಲ್ದಾರ್ ಡಾ. ಶಿವಕುಮಾರ ಬಿರಾದಾರ, ಸಿಪಿಐ ನಾಗರಾಜ ಕಮ್ಮಾರ, ಪಿಎಸ್‌ಐ ಸಿ. ಪ್ರಕಾಶ್, ಆಹಾರ ನಿರೀಕ್ಷಕ ಸಂಜಯ್ ಸೇರಿದಂತೆ ಇತರೆ ಅಧಿಕಾರಿಗಳು ರೈತರ ಮನವೊಲಿಸಿ ವಾಹನಗಳ ಸಂಚಾರಕ್ಕೆ ರಸ್ತೆ ತೆರವುಗೊಳಿಸಿದರು.

ನಂತರ ಎಪಿಎಂಸಿ ಆವರಣದಲ್ಲಿಯೇ ರೈತರ ಸಮ್ಮುಖದಲ್ಲಿ ಲಾರಿ ಏಜೆನ್ಸಿದಾರರು ಹಾಗೂ ಸಂಬಂಧಿಸಿದ ಮೇಲಾಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಸಮಸ್ಯೆ ತಿಳಿಗೊಳಿಸಲು ಮುಂದಾದರು, ಆದರೂ ರೈತರು ನೀವು ಏನಾದರೂ ಮಾಡಿಕೊಳ್ಳಿ ನಮ್ಮ ರಾಗಿಯನ್ನು ತ್ವರಿತವಾಗಿ ಖರೀದಿಸಿ, ಕೃಷಿ ಚಟುವಟಿಕೆಗಳಿಗೆ ಅನುವು ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ನಂತರ ರೈತರನ್ನು ಸಮಾಧಾನ ಪಡಿಸಲು ಮುಂದಾದ ತಹಶೀಲ್ದಾರ್ ದಾವಣಗೆರೆ ಖರೀದಿ ಮೇಲಾಧಿಕಾರಿಗಳೊಂದಿಗೆ ಸಂಪರ್ಕಿಸಿ ತಾತ್ಕಾಲಿಕವಾಗಿ ರೈತರ ರಾಗಿ ಖರೀದಿಸಿ ಗೋದಾಮಿನಲ್ಲಿ ಸಂಗ್ರಹಿಸಿ ನಂತರ ಲಾರಿಗಳ ಮೂಲಕ ಸಾಗಿಸಲು ಮನವಿ ಮಾಡಿಕೊಂಡು, ಎಪಿಎಂಸಿ ಅಧಿಕಾರಿಗಳೊಂದಿಗೆ ಚರ್ಚಿಸಿ ಆವರಣದಲ್ಲಿರುವ ಗೋದಾಮಿಗೆ ತುಂಬಲು ಸೂಚಿಸಿ ರಾಗಿ ಖರೀದಿಸಲು ಆರಂಭಿಸಿದರು.

ಬೈರಾಪುರ ಗ್ರಾಮದಲ್ಲಿ ರಾಗಿಯನ್ನು ಶೇಖರಿಸುವ ಗೋದಾಮಿನಲ್ಲಿ ಅನ್‌ಲೋಡ್ ಮಾಡಲು ತಡವಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಲೋಡ್ ತುಂಬಿದ ಲಾರಿಗಳು ಅಲ್ಲಿಯೇ ಬೀಡುಬಿಟ್ಟ ಕಾರಣ ಲಾರಿಗಳ ಕೊರತೆಯಾಗಿ ಹರಪನಹಳ್ಳಿ ಕೇಂದ್ರದಲ್ಲಿ ಲಾರಿಗಳು ಇಲ್ಲದೆ ರಾಗಿ ತೂಕದ ಕೆಲಸ ವಿಳಂಬವಾಗಿದೆ ಎಂದು ಖರೀದಿದಾರರು ಮನವರಿಕೆ ಮಾಡಿಕೊಟ್ಟರು.

# ಜನರ ಮಾನ ರಕ್ಷಿಸಿದ ನೇಕಾರರಿಂದ ವಿದ್ಯಾರ್ಜನೆಗೆ ಪ್ರೋತ್ಸಾಹ ಶ್ಲಾಘನೆ



**ರಾಣೇಬೆನ್ನೂರಿನ ಕಾರ್ಯಕ್ರಮದಲ್ಲಿ ಪ್ರಭಾವತಿ ತಿಳವಳ್ಳಿ**

ರಾಣೇಬೆನ್ನೂರು, ಜೂ. 2-ಬಟ್ಟೆ ನೇಯ್ದುಕೊಟ್ಟುರು ಜನರ ಮಾನ ರಕ್ಷಣೆಯ ಕಾಯಕದಲ್ಲಿ ತೊಡಗಿದ್ದ ನೇಕಾರ ಸಮಾಜದವರು ಬಡ ಮಕ್ಕಳಿಗೆ ಉಚಿತವಾಗಿ ಬ್ಯಾಗ್ ಮತ್ತು ನೋಟ್ ಬುಕ್‌ಗಳನ್ನು ವಿತರಣೆ ಮಾಡಿ ವಿದ್ಯಾರ್ಜನೆಗೆ ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ ಎಂದು ನಗರಸಭೆ ಉಪಾಧ್ಯಕ್ಷೆ ಪ್ರಭಾವತಿ ತಿಳವಳ್ಳಿ ಹೇಳಿದರು.

ತಮ್ಮ ತಂದೆ ಮಾಲತೇಶಪ್ಪ, ತಾಯಿ ಲಕ್ಷ್ಮವ್ವ ಸ್ಮರಣಾರ್ಥ ಶ್ರೀ ಸಾಲೇಶ್ವರ ಚಿಟ್ ಮಾಲೀಕ ಈಶ್ವರ ಚಿನ್ನಿಕಟ್ಟಿ ಅವರು 2 ಸಾವಿರ ವಿದ್ಯಾರ್ಥಿಗಳಿಗೆ ಕೊಟ್ಟ ಬ್ಯಾಗ್ ಹಾಗೂ ಬುಕ್ ವಿತರಿಸಿ ಮಾತನಾಡಿದರು.

ಹಣಕಾಸು ಸಂಸ್ಥೆ ವ್ಯಾಪಾರ ಮಾಡುವುದು ಲೆಕ್ಕಾಚಾರವೇ. ಆದರೆ ಇಲ್ಲಿ ದುಡಿದಿದ್ದರಲ್ಲಿ ಬಡ ಮಕ್ಕಳಿಗೆ ಈ ರೀತಿ ದಾನ ಮಾಡುವವರು ಮೇರು ವ್ಯಕ್ತಿತ್ವ ಹೊಂದಿದವರು. ಆ ಸಾಲಿನಲ್ಲಿ ನೇಕಾರ ಸಮಾಜದ ಈಶ್ವರ ಚಿನ್ನಿಕಟ್ಟಿ ಬರಲಿದ್ದಾರೆ ಎಂದು ಉಪಾಧ್ಯಕ್ಷೆ ಪ್ರಭಾವತಿ ತಿಳವಳ್ಳಿ ಶ್ಲಾಘಿಸಿದರು.

ನಗರಾಧ್ಯಕ್ಷೆ ರೂಪಾ ಚಿನ್ನಿಕಟ್ಟಿ, ಸದಸ್ಯರಾದ ಶೇಖಪ್ಪ ಹೊಸಗೌಡ್ರ, ಪ್ರಕಾಶ ಬುರಡಿಕಟ್ಟಿ, ಹುಚ್ಚಪ್ಪ ಮೆಡ್ಲೇರಿ, ಮಲ್ಲಿಕಾರ್ಜುನ ಅಂಗಡಿ, ಪ್ರಾಧಿಕಾರದ ಮಾಜಿ ಅಧ್ಯಕ್ಷ ಚೋಳಪ್ಪ ಕಸವಾಳ, ಎಪಿಎಂಸಿ ಮಾಜಿ ನಿರ್ದೇಶಕ ಪರಮೇಶ ಗೂಳಣ್ಣನವರ ಮಾತನಾಡಿ, ಈಶ್ವರ ಅವರು ಯಾವುದೇ ರಾಜಕೀಯ ಲಾಭದ ಆಸೆಯನ್ನು ಇಟ್ಟುಕೊಳ್ಳದೆ ಇಂತಹ ಜನಪರ ಕಾರ್ಯಗಳನ್ನು ಮಾಡುತ್ತಿರುವುದು ಮಾದರಿಯಾಗಿದೆ ಎಂದರು.

ನೀಲಕಂಠೇಶ್ವರ ದೇವಸ್ಥಾನದ ಕಾಕಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸಿದ್ದಪ್ಪ ಬಾಗಲರ, ನೇಕಾರ ಸಮಾಜದ ಮುಖಂಡರಾದ ಶಿವಾನಂದ ಸಾಲಗೇರಿ, ರಾಘವೇಂದ್ರ ಚಿನ್ನಿಕಟ್ಟಿ, ಹನುಮಂತಪ್ಪ ಮುಕ್ತೇನಹಳ್ಳಿ ಮತ್ತಿತರರಿದ್ದರು. ಈಶ್ವರ ಚಿನ್ನಿಕಟ್ಟಿ ಸ್ವಾಗತಿಸಿದರು.

## ಕೊಟ್ಟೂರು : ಹೂವಿನ ಅಲಂಕಾರ



ಕೊಟ್ಟೂರು, ಜೂ. 2 - ಹರಕೆ ಹೊತ್ತ ದಾವಣಗೆರೆಯ ಭಕ್ತರೊಬ್ಬರು ಇಂದು ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಹೂವಿನ ಅಲಂಕಾರ ಮಾಡಿಸಿದ್ದರು.

## ನಗರದ ಜೈನ್ ಕಾಲೇಜಿನಲ್ಲಿ ಇಂದು

ಜೈನ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇಂದು ಇಂಜಿನಿಯರಿಂಗ್ ಇನ್ನೋವೇಷನ್ ಕುರಿತಾಗಿ ಅಂತರರಾಷ್ಟ್ರೀಯ ಸಮ್ಮೇಳನ ಐಸಿಇಐ-2022 ಆಯೋಜಿಸಲಾಗಿದೆ. ಸಮ್ಮೇಳನದ ಮುಖ್ಯ ಅತಿಥಿಗಳಾಗಿ ಡಾ. ಷಾದಿ, ಡಾ. ಲಿಪಲ ಜಗನ್ನಾದಂ ಉಪಸ್ಥಿತರಿರುವರು. ಗೌರವ ಅತಿಥಿಗಳಾಗಿ ಡಾ. ಬಿ.ಡಿ. ಪರಮೇಶಚಾರಿ, ಡಾ. ಕೆ.ಎಲ್. ಹೇಮಲತ ಹಾಗೂ ಬೆಳಗಾವಿ ಜೈನ್ ಕಾಲೇಜ್ ಆಫ್ ಇಂಜಿನಿಯರಿಂಗ್‌ನ ಪ್ರಿನ್ಸಿಪಾಲ್ ಡಾ. ಜೆ. ಶಿವಕುಮಾರ್, ಪಾಲ್ಗೊಳ್ಳಲಿದ್ದಾರೆ.

# ಬಸವಣ್ಣ ಕುರಿತು ಅನೈತಿಹಾಸಿಕ ಪಾಠ ಪರಿಷ್ಕರಣೆ; ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಖಂಡನೆ

ದಾವಣಗೆರೆ, ಜೂ.2- ಬಸವಣ್ಣನವರ ಕುರಿತ ಪಾಠದಲ್ಲಿ ಅನೈತಿಹಾಸಿಕ ವಿಷಯಗಳನ್ನು ಸೇರಿಸಲಾಗಿದೆ ಎಂದು ಲಿಂಗಾಯತ ಮಠಾಧಿಪತಿಗಳ ಒಕ್ಕೂಟವು ಖಂಡಿಸಿದೆ.

9ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಲಿಂಗಾಯತ ಧರ್ಮಗುರು ಬಸವಣ್ಣ ನವರನ್ನು ಕುರಿತ ಪಾಠದಲ್ಲಿ ಈ ವರ್ಷ ಕೆಲವು ಬದಲಾವಣೆಗಳನ್ನು ಮಾಡಿ ಪ್ರಕಟಿಸಿರುವುದು ಕುಚೋದ್ಯದ ಸಂಗತಿಯಾಗಿದೆ ಎಂದು ಒಕ್ಕೂಟದ ಅಧ್ಯಕ್ಷರಾದ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಈ ಕೆಳಕಂಡಂತೆ ವಿವರಣೆ ನೀಡಿದ್ದಾರೆ.

* ಉಪನಯನವಾದ ನಂತರ ಕೂಡಲ ಸಂಗಮಕ್ಕೆ ನಡೆದರು ಎಂದು ಬರೆಯಲಾಗಿದೆ. ಇದು ತಪ್ಪು. ಬಸವಣ್ಣನವರು ತಮ್ಮ ಸಹೋದರಿ ಅಕ್ಕನಾಗಮ್ಮಗೆ ಇಲ್ಲದ ಉಪನಯನ ನನಗೇಕೆ? ಎಂದು ಧಿಕ್ಕರಿಸಿ ಕೂಡಲಸಂಗಮಕ್ಕೆ ಹೋದುದು ಐತಿಹಾಸಿಕ ಸಂಗತಿ.

* 'ಶೈವ-ಗುರುಗಳ ಸಾನ್ನಿಧ್ಯದಲ್ಲಿ ಲಿಂಗ ದೀಕ್ಷೆಯನ್ನು ಪಡೆದು' ಎಂದು ಬರೆಯಲಾಗಿದೆ. ಇದು ತಪ್ಪು. ಶೈವ ಗುರುಗಳು ಗುಡಿ-ಗುಂಡಾರಗಳಲ್ಲಿರುವ ಸ್ಥಾವರ ಲಿಂಗಾರಾಧಕರು. ಅವರು ಹೇಗೆ ಇಷ್ಟಲಿಂಗ ದೀಕ್ಷೆ ಮಾಡಬಲ್ಲರು. ಇಷ್ಟಲಿಂಗ ಬಸವಣ್ಣನವರ ಪರಿಕಲ್ಪನೆಯಲ್ಲಿ ಮೂಡಿಬಂದುದು. ಅವರೇ ಇಷ್ಟಲಿಂಗದ ಜನಕರು, ಅಲ್ಲಮಪ್ರಭು ದೇವರಾದಿಯಾಗಿ ಎಲ್ಲಾ ಶರಣರು ತಮ್ಮ ವಚನಗಳಲ್ಲಿ ಇದನ್ನು ಉಲ್ಲೇಖಿಸಿದ್ದಾರೆ. 'ಬಸವಣ್ಣನ ಉದರದಲ್ಲಿ ಹುಟ್ಟಿತ್ತು ಲಿಂಗ' ಎಂದು ಚನ್ನಬಸವಣ್ಣನವರು ಉಲ್ಲೇಖಿಸಿದ್ದಾರೆ. 'ನಿನ್ನ ನಾನರಿಯದ ಮುನ್ನ ನೀನೆಲ್ಲಿ ಇದ್ದೆ'? ಎನ್ನೊಳಗಿದ್ದು ನಿನ್ನ ತೋರಲಿಕೆ ನೀನೆ ರೂಪಾದೆ' ಎಂದು ಬಸವಣ್ಣನವರು ಸ್ವತಃ ತಮ್ಮ ವಚನದಲ್ಲಿ ಹೇಳಿದ್ದಾರೆ.

* ಇವರು ವೀರಶೈವ ಮತವನ್ನು ಅಭಿವೃದ್ಧಿಪಡಿಸಿದರು ಎಂದು ಈಗ ಪಠ್ಯದಲ್ಲಿ ಸೇರಿಸಲಾಗಿದೆ. ಇದು ಕೂಡ ಶುದ್ದ ತಪ್ಪು. ವೀರಶೈವ ಶೈವದ ಶಾಖೆ. ಅದು ಮತವಿರಬಹುದು ಈಗ ಅದನ್ನು ಲಿಂಗಾಯತ ಧರ್ಮದ ಒಂದು ಪಂಗಡ ಎಂದು ಹೆಸರಿಸಲಾಗಿದೆ. ಸರ್ಕಾರದ ದಾಖಲೆಗಳಲ್ಲಿ ಕ್ರಿ.ಶ.1871 ರಿಂದಲೂ ಇದನ್ನು ಕಾಣಬಹುದು. ಆದರೆ ಬಸವಣ್ಣನವರು ಲಿಂಗಾಯತ ಧರ್ಮದ ಸ್ಥಾಪಕರು ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಶೈವದಲ್ಲಿ ವರ್ಣಾಶ್ರಮದ ಆಚರಣೆ ಇದೆ. ಲಿಂಗಾಯತರಲ್ಲಿ ವರ್ಣಾಶ್ರಮ ಭೇದಗಳಿಲ್ಲ. ಬಸವಣ್ಣನವರು ವೀರಶೈವ ಮತವನ್ನು ಅಭಿವೃದ್ಧಿ ಪಡಿಸಿದರು ಎಂಬುದು ಶುದ್ಧ ಅನೈತಿಹಾಸಿಕ.

* ಕಳೆದ ವರ್ಷ ಪಠ್ಯದಲ್ಲಿದ್ದ- ವೈದಿಕ ಧರ್ಮದ ಆಚರಣೆಗಳ ನಿರಾಕರಣೆ, ಮಾನವೀಯ ಮಾಲ್ಯಗಳಿಂದ ಕೂಡಿದ ಸಿದ್ಧಾಂತದ ಪ್ರತಿಪಾದನೆ, ಅನಿಷ್ಟ ಪದ್ಧತಿಗಳ ವಿರುದ್ಧದ ಹೋರಾಟ, ಸ್ವಾವಲಂಬನೆ, ದೇಹವೇ ದೇಗುಲ ತತ್ವಗಳ ಬೋಧನೆ ಮುಂತಾದವುಗಳ ಜೊತೆಗೆ ಅವರು ಕನ್ನಡವನ್ನು ಬಳಸುವ ಮೂಲಕ ತಮ್ಮ ಚಳುವಳಿಯನ್ನು ಜನಮುಖಿ ಯಾಗಿಸಿದರು ಎನ್ನುವಂತಹ ಸಾಲುಗಳನ್ನು ಕೈಬಿಟ್ಟಿರುವುದು ದುರ್ದೈವದ ಸಂಗತಿ.

ಈ ಹಿನ್ನೆಲೆಯಲ್ಲಿ ಪರಿಷ್ಕೃತ ಪಠ್ಯದಲ್ಲಿ ಆಗಿರುವ ಈ ಎಲ್ಲ ದೋಷಗಳನ್ನು ನಿವಾರಿಸಿ, ಪಠ್ಯಪುಸ್ತಕ ಮುದ್ರಿಸಬೇಕು. ಇದೇ ರೀತಿ ರಾಷ್ಟ್ರಕವಿ ಕುವೆಂಪು ಅವರ ಬಗ್ಗೆ ಮತ್ತು ನಾಡಗೀತೆಯ ಬಗ್ಗೆಯೂ ಅವಹೇಳನಕಾರಿ ವಿಷಯ ಪ್ರಕಟವಾಗಿರುವುದು ಸರಿಯಲ್ಲ. ಇದು ಅತ್ಯಂತ ಖಂಡನೀಯವಾಗಿದೆ. ಅದನ್ನು ಸಹ ಸರಿಪಡಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಕೊಳ್ಳಬೇಕು ಎಂದು ಮುಖ್ಯಮಂತ್ರಿಗಳನ್ನು ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಒತ್ತಾಯಿಸಿದ್ದಾರೆ.

## ಶ್ರೀ ಕೇದಾರ ಪೀಠಕ್ಕೆ ಎಸ್ಸೆಸ್ಸೆಂ ಕುಟುಂಬ ಭೇಟಿ



ದಾವಣಗೆರೆ, ಜೂ.3- ಕೇದಾರನಾಥನ ದರ್ಶನ ಪಡೆದು, ವೈರಾಗ್ಯ ಪೀಠಕ್ಕೆ ಆಗಮಿಸಿ ಶ್ರೀ ಕೇದಾರ ಜಗದ್ಗುರುಗಳ ದರ್ಶನಾಶೀರ್ವಾದ ಪಡೆದ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಪರಿವಾರ ಪೀಠವನ್ನು ವೀಕ್ಷಿಸಿದರು. ಭಾವೈಕ್ಯತೆಯ ಕೇಂದ್ರವಾಗಿರುವ ವೈರಾಗ್ಯ ಧರ್ಮಪೀಠ ಕನ್ನಡಿಗರ ಪೀಠವಾಗಿರುವುದು ಹಾಗೂ ಬೆಳೆದಿರುವುದು ನಮ್ಮೆಲ್ಲರ ಸೌಭಾಗ್ಯ ಎಂದು ಮಲ್ಲಿಕಾರ್ಜುನ್ ಹರ್ಷ ವ್ಯಕ್ತಪಡಿಸಿದರು.

## ಯುಪಿಎಸ್ಸಿ ಮೊದಲ ಸ್ಥಾನದ ಅಭ್ಯರ್ಥಿಗೆ ಶೇ.54.56 ಅಂಕ

ನವದೆಹಲಿ, ಜೂ. 2 – ಕೇಂದ್ರ ಲೋಕ ಸೇವಾ ಆಯೋಗ (ಯು.ಪಿ.ಎಸ್.ಸಿ.) ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದಿದ್ದ ಶೃತಿ ಶರ್ಮ ಅವರು ಶೇ.54.56ರಷ್ಟು ಅಂಕ ಗಳಿಸಿದ್ದಾರೆ.

ಎರಡನೇ ಸ್ಥಾನದಲ್ಲಿರುವ ಅಂಕಿತ ಅಗರ್‌ವಾಲ್ ಪಡೆದಿರುವ ಅಂಕಗಳ ಶೇ.51.85 ಎಂದು ಯು.ಪಿ.ಎಸ್.ಸಿ. ತಿಳಿಸಿದೆ. ಮುಖ್ಯ ಪರೀಕ್ಷೆಯಲ್ಲಿ 1,750 ಹಾಗೂ ಸಂದರ್ಶನಕ್ಕೆ 275 ಅಂಕಗಳಿರುತ್ತವೆ. ಒಟ್ಟಾರೆ 2,025 ಅಂಕಗಳಲ್ಲಿ ಶರ್ಮ 1,105 ಅಂಕ ಪಡೆದಿದ್ದಾರೆ. ಲಿಖಿತ ಪರೀಕ್ಷೆಯಲ್ಲಿ 932 ಹಾಗೂ ಸಂದರ್ಶನದಲ್ಲಿ 173 ಅಂಕ ಪಡೆದಿದ್ದಾರೆ.

## ಕೇಂದ್ರದಿಂದ ಪಿಎಂ ಶ್ರೀ ಶಾಲೆಗಳ ಆರಂಭ

ನವದೆಹಲಿ, ಜೂ. 2 – ವಿದ್ಯಾರ್ಥಿಗಳನ್ನು ಭವಿಷ್ಯಕ್ಕಾಗಿ ಸಿದ್ಧಪಡಿಸುವ ಉದ್ದೇಶದಿಂದ 'ಪಿ.ಎಂ. ಶ್ರೀ ಶಾಲೆ'ಗಳನ್ನು ತೆರೆಯಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ. ಗುಜರಾತ್‌ನಲ್ಲಿ ಆಯೋಜಿಸಲಾಗಿರುವ ಎರಡು ದಿನಗಳ ರಾಷ್ಟ್ರೀಯ ಶಿಕ್ಷಣ ಸಚಿವರ ಸಮಾವೇಶದಲ್ಲಿ ಅವರು ಮಾತನಾಡುತ್ತಿದ್ದರು. ಪಿಎಂ ಶ್ರೀ ಶಾಲೆಗಳು ನೂತನ ಶಿಕ್ಷಣ ನೀತಿಯ ಪ್ರಯೋಗಾಲಯಗಳೂ ಆಗಿರಲಿವೆ ಎಂದವರು ಹೇಳಿದ್ದಾರೆ.

## ರೈತರಿಗೆ ಪಶುಸಂಗೋಪನಾ ಚಟುವಟಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಜೂನ್ ಮಾಹೆಯಲ್ಲಿ ರೈತರಿಗೆ ಪಶುಸಂಗೋಪನಾ ಚಟುವಟಿಕೆ ಕುರಿತು ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಇಂದಿನಿಂದ ದೇ ದಿನಾಂಕ 30 ರವರೆಗೆ ಪಶುವೈದ್ಯರಿಗೆ ಪುನಃಶ್ಚೇತನ ತರಬೇತಿ 30 ಜನರಿಗೆ, ಆಧುನಿಕ ಹೈನುಗಾರಿಕೆ ತರಬೇತಿ, ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ, ಕೋಳಿ ಸಾಕಾಣಿಕೆ ತರಬೇತಿ ಕಾರ್ಯಕ್ರಮದಲ್ಲಿ ತಲಾ 25 ಜನರಿಗೆ ತರಬೇತಿ ನೀಡುವ ಗುರಿ ಹೊಂದಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ 08192-233787 ಗೆ ಸಂಪರ್ಕಿಸಬಹುದಾಗಿದೆ ಎಂದು ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರ ಇವರು ತಿಳಿಸಿದ್ದಾರೆ.

# ನೇರ ಪಾವತಿ ಪೌರ ಕಾರ್ಮಿಕರಿಗೆ ಏಕಕಾಲದಲ್ಲಿ ಖಾಯಂಗೆ ಆಗ್ರಹ

ದಾವಣಗೆರೆ, ಜೂ.2- ನಗರ ಪಾಲಿಕೆಯಲ್ಲಿ ನೇರ ಪಾವತಿ ಪೌರ ಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿರುವ 183 ಜನರನ್ನು ಏಕಕಾಲದಲ್ಲಿ ಖಾಯಂಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾ ಸಂಘವು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಮನವಿ ಸಲ್ಲಿಸಿತು.

ಈಗಾಗಲೇ ಸರ್ಕಾರದ ಹಂತದಲ್ಲಿ ಎಲ್ಲಾ ನೇರ ಪಾವತಿ ಪೌರ ಕಾರ್ಮಿಕರನ್ನು ಖಾಯಂಗೊಳಿಸುವುದು ಪಕ್ರಿಯೆಯಲ್ಲಿದೆ. ಆದ್ದರಿಂದ ಎಲ್ಲಾ ನೇರ ಪಾವತಿ ಪೌರ ಕಾರ್ಮಿಕರನ್ನು ಏಕ ಕಾಲದಲ್ಲಿ ಖಾಯಂಗೊಳಿಸಲು ಸರ್ಕಾರಕ್ಕೆ ಕೂಡಲೇ ಶಿಫಾರಸ್ಸು ಮಾಡಬೇಕು. ಸುಮಾರು 15 ವರ್ಷಗಳಿಂದ ಕಾವಲುಗಾರರು (ಸ್ಮಶಾನ) ಕೆಲಸ ನಿರ್ವಹಿಸುತ್ತಿರುವ ಕೆಲಸಗಾರರಿಗೆ ಸೇವಾ ಭದ್ರತೆ ಇಲ್ಲವಾಗಿದೆ. ಗುತ್ತಿಗೆ ಪದ್ಧತಿಯನ್ನು ರದ್ದು ಮಾಡಿ ಪಾಲಿಕೆಯಲ್ಲಿ ನೇರ ಪಾವತಿಯಲ್ಲಿ ಕೆಲಸ ನಿರ್ವಹಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು. ನೇರ ಪಾವತಿ ಪೌರ ಕಾರ್ಮಿಕರಾಗಿ ಕೆಲಸ ನಿರ್ವಹಿಸಿ ಮೃತರಾಗಿರುವ ಕುಟುಂಬಗಳಿಗೆ ಪರಿಹಾರ ನೀಡುವುದು. ಕುಟುಂಬದಲ್ಲಿ ಒಬ್ಬರಿಗೆ ನೇರ ಪಾವತಿ ಕೆಲಸ ನೀಡಬೇಕು ಎಂದು ಆಗ್ರಹಿಸಿದರು.

ಈ ವೇಳೆ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಎಲ್.ಎಂ. ಹನುಮಂತಪ್ಪ, ಉಪಾಧ್ಯಕ್ಷ ಎಲ್.ಹೆಚ್. ಸಾಗರ್, ಕಾರ್ಯದರ್ಶಿ ಓಮೇಶ್ ಸೇರಿದಂತೆ ಇತರರು ಇದ್ದರು.

# ಅಡಿಕೆ, ವೀಳ್ಯೆದೆಲೆ ಬೆಳೆ ವಿಮೆಗೆ ನೋಂದಾಯಿಸಲು ಅವಕಾಶ

**ಹರಿಹರ**

ಹರಿಹರ, ಜೂ. 2- ಹರಿಹರ ತಾಲ್ಲೂಕಿನಲ್ಲಿ 2022-23ನೇ ಸಾಲಿನ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆವಿಮೆ ಯೋಜನೆಯಡಿ ಮುಂಗಾರು ಹಂಗಾಮಿನ ಅವಧಿಗೆ ತಾಲ್ಲೂಕಿನಲ್ಲಿ ಮರುವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ವಿಮಾ ಯೋಜನೆಯನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ಜಾರಿಗೊಳಿಸುತ್ತಿದ್ದು, ಫಸಲಿಗೆ ಬಂದ ಅಡಿಕೆ ಹಾಗೂ ಕೊಯ್ಲಿಗೆ ಬಂದ ವೀಳ್ಯೆದೆಲೆ ಬೆಳೆಗಳನ್ನು ನೋಂದಾಯಿಸಿಕೊಳ್ಳಬಹುದಾಗಿದೆ.

ರೈತರು ಶೇ.5 ರಷ್ಟು ವಿಮಾ ಕಂತು ಪಾವತಿಸಬೇಕಿದ್ದು, ಅಡಿಕೆ ಬೆಳೆಗೆ ಪ್ರತಿ ಹೆಕ್ಟೇರ್‌ಗೆ ರೂ.1,28,000 ವಿಮಾ ಮೊತ್ತಕ್ಕೆ 6400.ರೂ, ಪ್ರತಿ ಹೆಕ್ಟೇರ್‌ಗೆ ವಿಮಾ ಕಂತು ಹಾಗೂ ವೀಳ್ಯೆದೆಲೆ ಬೆಳೆಗೆ ಪ್ರತಿ ಹೆಕ್ಟೇರ್‌ಗೆ ರೂ.1,17,000 ವಿಮಾ ಮೊತ್ತಕ್ಕೆ 5850.ರೂ ಪ್ರತಿ ಹೆಕ್ಟೇರ್‌ಗೆ ವಿಮಾ ಕಂತು ಪಾವತಿಸಬೇಕು. ರೈತರು ವಿಮಾ ಮೊತ್ತ ಪಾವತಿಸಲು ಜೂ.30 ಕೊನೆಯ ದಿನವಾಗಿರುತ್ತದೆ. ರೈತರು ಬೆಳೆಗಳ ವಿಮೆ ಕಂತನ್ನು ತಮ್ಮ ವ್ಯಾಪ್ತಿಯ ಬ್ಯಾಂಕ್ ಹಾಗೂ ಸಾಮಾನ್ಯ ಸೇವಾ ಕೇಂದ್ರಗಳಲ್ಲಿ (CSC)) ಪಾವತಿಸಿ ನೋಂದಣಿ ಮಾಡಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಮತ್ತು ಸಂಬಂಧಪಟ್ಟ ಹೋಬಳಿ ಮಟ್ಟದ ಸಹಾಯಕ ತೋಟಗಾರಿಕೆ ಅಧಿಕಾರಿಗಳನ್ನು ಅಥವಾ ಹತ್ತಿರದ ಬ್ಯಾಂಕ್ ಅಧಿಕಾರಿಗಳನ್ನು ಸಂಪರ್ಕಿಸಬಹುದೆಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ಜಿ.ಪಿ.ರೇಖಾ ಹರಿಹರ ಇವರು ತಿಳಿಸಿದ್ದಾರೆ.

## ಸೋನಿಯಾಗೆ ಕೊರೊನಾ



ನವದೆಹಲಿ, ಜೂ. 2 – ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಕೊರೊನಾ ಸೋಂಕು ಬಂದಿದ್ದು, ಅವರು ಸ್ವಯಂ ಕ್ವಾರಂಟೈನ್‌ನಲ್ಲಿದ್ದಾರೆ ಎಂದು ಪಕ್ಷ ತಿಳಿಸಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೇವಾಲ, ಬುಧವಾರ ರಾತ್ರಿಯಿಂದ ಸೋನಿಯಾ ಗಾಂಧಿ ಅವರಲ್ಲಿ ಜ್ವರ ಕಾಣಿಸಿಕೊಂಡಿತ್ತು. ಗುರುವಾರ ಬೆಳಿಗ್ಗೆ ಟೆಸ್ಟ್ ಮಾಡಿಸಿಕೊಂಡಾಗ ಪಾಸಿಟಿವ್ ಬಂದಿದೆ ಎಂದಿದ್ದಾರೆ. ವೈದ್ಯಕೀಯ ಸಲಹೆಯಂತೆ ಸೋನಿಯಾ ಗಾಂಧಿ ಅವರು ಪ್ರತ್ಯೇಕವಾಗಿದ್ದಾರೆ. ಅವರ ಆರೋಗ್ಯ ಸ್ಥಿರವಾಗಿದ್ದು ಚೇತರಿಸಿಕೊಳ್ಳುತ್ತಿದ್ದಾರೆ ಎಂದೂ ಸುರ್ಜೇವಾಲ ತಿಳಿಸಿದ್ದಾರೆ.

# ನಾಯಕ ಜನಾಂಗದ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ತಪಸ್ವಿ ಪುಣ್ಯಾನಂದಶ್ರೀ



ಬೆಂಗಳೂರು, ಜೂ.2- ಲಿಂಗೈಕ್ಯ ಶ್ರೀ ಪುಣ್ಯಾನಂದಪುರಿ ಮಹಾ ಸ್ವಾಮೀಜಿ ರಾಜನಹಳ್ಳಿ ವಾಲ್ಮೀಕಿ ಗುರು ಪೀಠವನ್ನು ಕಟ್ಟಿ, ಬೆಳೆಸಿ ರಾಜ್ಯದ ವಾಲ್ಮೀಕಿ ನಾಯಕ ಜನಾಂಗದ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ಮಹಾ ತಪಸ್ವಿ ಎಂದು ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಗುಣಗಾನ ಮಾಡಿದರು.

ಇಲ್ಲಿನ ಫ್ರೀಡಂ ಪಾರ್ಕ್‌ನಲ್ಲಿ ಲಿಂಗೈಕ್ಯ ಶ್ರೀ ಪುಣ್ಯಾನಂದ ಪುರಿ ಮಹಾ ಸ್ವಾಮೀಜೀಯವರ ಜನ್ಮದಿನಾಚರಣೆ ಹಾಗೂ ಪರಿಶಿಷ್ಟ ಜಾತಿ, ಪಂಗಡದ ಮೀಸಲಾತಿ ಪ್ರಮಾಣವನ್ನು ಕ್ರಮವಾಗಿ ಶೇ.15 ರಿಂದ 17ಕ್ಕೆ, 3ರಿಂದ 7.5ಕ್ಕೆ ಹೆಚ್ಚಿಸುವಂತೆ ಒತ್ತಾಯಿಸಿ ನಡೆಯುತ್ತಿರುವ 112 ದಿನಗಳ ಧರಣಿ ಸತ್ಯಾಗ್ರಹದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ವಾಲ್ಮೀಕಿ ನಾಯಕ ಸಮಾಜವನ್ನು ಮುಖ್ಯ ವಾಹಿನಿಗೆ ತರಲು ಶ್ರೀ ಪುಣ್ಯಾನಂದ ಪುರಿ ಮಹಾಸ್ವಾಮೀಜೀ ರಾಜ್ಯ ಪ್ರವಾಸ ಮಾಡಿ ಸಮಾಜವನ್ನು ಜಾಗೃತಿ ಮಾಡಲು ಶ್ರಮಿಸಿದ ದೈವೀ ಪುರುಷರಾಗಿದ್ದಾರೆ ಎಂದರು.

ಈಗಾಗಲೇ ಕೇಂದ್ರ ಸರ್ಕಾರ 2005ರ ಆದೇಶದಂತೆ ಪರಿಶಿಷ್ಟ ಪಂಗಡಕ್ಕೆ ಶೇ.7.5 ರಷ್ಟು ಮೀಸಲಾತಿಯನ್ನು ಕರ್ನಾಟಕ ರಾಜ್ಯ ದಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ ಪಡೆಯುತ್ತಿದ್ದೇವೆ. ಆದರೆ ಶೈಕ್ಷಣಿಕವಾಗಿ ಹಾಗೂ ಔದ್ಯೋಗಿಕವಾಗಿ ವಂಚನೆ ಮಾಡಿರುವುದು ತುಂಬಲಾರದ ನಷ್ಟವಾಗಿದೆ. 1956ರಲ್ಲಿ ಪರಿಶಿಷ್ಟ ಪಂಗಡಕ್ಕೆ ಶೇ.3ರಷ್ಟು ಮೀಸಲಾತಿ ನಿಗದಿಪಡಿಸಿತ್ತು. ಸರ್ಕಾರಗಳು ಸಾಕಷ್ಟು ಬೇರೆ ಜಾತಿ ಜನಾಂಗಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಿದ್ದು ಮೀಸಲಾತಿ ಪ್ರಮಾಣ ಮಾತ್ರ ಹೆಚ್ಚು ಮಾಡುತ್ತಿಲ್ಲ. ಇದು ಸಂವಿಧಾನ ವಿರೋಧಿ ನಿಲುವಾಗಿದೆ. ಕಾನೂನಿನ ಪ್ರಕಾರ ಜಾತಿ ಜನಸಂಖ್ಯೆಗನುಸಾರವಾಗಿ ಮೀಸಲಾತಿಯನ್ನು ಕೇಂದ್ರ ಸರ್ಕಾರ ಹೆಚ್ಚಿಸಿ ನೀಡಿರುವಂತೆ ರಾಜ್ಯ ಸರ್ಕಾರ ಕೂಡಲೇ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಹಡಗಲಿ ಶಾಸಕ ಪಿ.ಟಿ ಪರಮೇಶ್ವರ ನಾಯ್ಕ, ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ ಆಕಾಂಕ್ಷಿ ಐಗೋಳ್ ಚಿದಾನಂದಪ್ಪ ಮಾತನಾಡಿದರು.

ನಿವೃತ್ತ ಡಿ.ಎಸ್.ಪಿ. ಪಂಪಾಪತಿ, ಜಗಳೂರಿನ ಕೆ.ಪಿ. ಪಾಲಯ್ಯ, ಹರಪನಹಳ್ಳಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ, ಹಡಗಲಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಎಲ್.ಜಿ. ಹೊನ್ನಪ್ಪನವರ್. ಬಳ್ಳಾರಿ ಜಿಲ್ಲಾ ಬಿಜೆಪಿ ಎಸ್.ಟಿ. ಮೋರ್ಚಾದ ಅಧ್ಯಕ್ಷ ಬಂಗಾರು ಹನುಮಂತು, ಮುಖಂಡರಾದ ಹನುಮಂತಪ್ಪ, ಕೋಟೆಪ್ಪ, ನಿವೃತ್ತ ಮುಖ್ಯ ಶಿಕ್ಷಕ ಆನಂದಪ್ಪ, ದ್ಯಾಪನಾಯಕನಹಳ್ಳಿ ಜಿ.ಕೆ. ಬಸವರಾಜ, ಟಿ.ಬಿ. ರಾಜ, ಇಂಜಿನಿಯರ್ ವೈ. ವಸಂತಕುಮಾರ್ ಸೇರಿದಂತೆ, ಇತರರು ಉಪಸ್ಥಿತರಿದ್ದರು.

WAREHOUSE AVAILABLE FOR RENT ON LONG/SHORT/DAILY TERM BASIS AT RAVI MILL PREMISES & CHITRADURGA GINNING FACTORY PREMISES
Interested Parties may contact at :
M/s R.Hanumanthappa & Son
Hanumanthappa Buildings,
Poona - Bangalore Road, Davangere - 577 002.
Phone No's. : 258834 / 258836

WANTED TEACHERS
Well qualified PG with B.Ed, Experienced, Committed, Enthusiastic and Proficiency in English and Possessing good Communication Skills to teach Mathematics, English, Computers, Drawing
Apply with in five working days.
Those intrested kindly Contact : Principal (CBSE)
St. Paul's Institutions,
P J Extension, Davangere.
Contact No: 08192 252590, Mobile : 91138 64885
E-Mail Id :stpaulscbse1920@gmail.com

## ನಾಳೆ ಸಾಂಸ್ಕೃತಿಕ, ಕಲಾ ತಂಡದವರಿಗೆ ಪ್ರಶಸ್ತಿ ಪ್ರದಾನ

ದಾವಣಗೆರೆ, ಜೂ.2- ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಜನ್ಮದಿನಾಚರಣೆ ಮತ್ತು 'ಕನ್ನಡ ನುಡಿ ಹಬ್ಬ'ದ ಸಾಂಸ್ಕೃತಿಕ, ಕಲಾ ತಂಡದವರಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಇದೇ ದಿನಾಂಕ 4 ರ ಶನಿವಾರ ಸಾಯಂಕಾಲ 4.30 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ.

ಉದ್ಘಾಟನೆಯನ್ನು ಡಾ. ನಾ. ಲೋಕೇಶ್ ಒಡೆಯರ್ ನೆರವೇರಿಸುವರು. ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ 'ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ನಾಡಿಗೆ ಕೊಟ್ಟ ಕೊಡುಗೆಗಳು' ವಿಷಯ ಕುರಿತು ಡಾ. ಪಿ. ನಾಗಭೂಷಣಗೌಡ ಉಪನ್ಯಾಸ ನೀಡುವರು. ಮುಖ್ಯ ಅತಿಥಿಗಳಾಗಿ ಎ.ಆರ್. ಉಜ್ಜನಪ್ಪ ಆಗಮಿಸುವರು. ಕಾರ್ಯಕ್ರಮದಲ್ಲಿ ಶ್ರೀಮತಿ ಎಸ್.ಎಂ. ಮಲ್ಲಮ್ಮ, ಶ್ರೀಮತಿ ಯಶಾ ದಿನೇಶ್, ಶ್ರೀಮತಿ ರೇಖಾ ಓಂಕಾರಪ್ಪ, ಶ್ರೀಮತಿ ರುದ್ರಾಕ್ಷಿಬಾಯಿ ಪುಟ್ಟಾನಾಯ್ಕ ಗೌರವ ಉಪಸ್ಥಿತರಿರುವರು.

## ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಗೂಡ್ಸ್ ಶೆಡ್ ರೋಡ್, ಹಲಗೇರಿ ರೋಡ್, ಎಂ.ಜಿ. ರೋಡ್, ಸ್ಟೇಷನ್ ರೋಡ್, ರಂಗನಾಥ ನಗರ, ದೊಡ್ಡಪೇಟೆ, ಜನತಾ ಬಜಾರ್, ಹನಗೋಡಿ ಓಣಿಗಳಲ್ಲಿ ಇಂದು ಮತ್ತು ನಾಡಿದ್ದು ದಿನಾಂಕ 4 ರಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಇರುವುದಿಲ್ಲ.





| Subjects | Highest Score | % |
|---|---|---|
| KANNADA | 124 | 125 |
| ENGLISH | 96 | 100 |
| HINDI | 100 | 100 |
| MATHEMATICS | 91 | 100 |
| SCIENCE | 94 | 100 |
| SOCIAL SCIENCE | 98 | 100 |

| Grade | STUDENTS |
|---|---|
| A+ | 03 |
| A | 10 |
| B+ | 15 |
| B | 05 |
| C+ | 01 |

| RESULTS | BOYS | GIRLS | TOTAL |
|---|---|---|---|
| Distinction | 02 | 08 | 10 |
| 1st Class | 13 | 10 | 23 |
| 2nd Class | 01 | 0 | 01 |





JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte